ಪ್ರೊ. ಎಸ್.ಕೆ. ರಾಮಚಂದ್ರರಾವ್



ಆಳ್ವಾರರ ನುಡಿ ಮುತ್ತುಗಳು

ಆಳ್ವಾರರ ನುಡಿಮುತ್ತುಗಳು

ಪದ್ಯಾನುವಾದ

ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರರಾವ್

ಐಬಿಎಚ್ ಪ್ರಕಾಶನ

ಗಾಂಧಿನಗರ ಬೆಂಗಳೂರು 560 009

ಬೆಲೆ : ರೂ. 12-00

© ಲೇಖಕರು 1985

ಮೊದಲನೆಯ ಮುದ್ರಣ : 1985. ಪ್ರಕಾಶಕರು : ಐಬಿಎಚ್ ಪ್ರಕಾಶನ
ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ ಗಾಂಧಿ
ನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್.
ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು 560 054.

ನನ್ನ ಮಗಳು

ಉಮಾ ಗೆ

ಅವಳ ಮದುವೆಯ ಸಂದರ್ಭದಲ್ಲಿ

(30–6–1985)

ಮೊದಲಲ್ಲಿ ಅರಿಕೆ

ವೇಂಗಡದ ಒಡೆಯ ನನ್ನ ಕುಲದೈವ, ಇಷ್ಟದೈವ. ಹಲಕಾಲದ ನನ್ನ ಹಿರಿಯರಂತೆ ನಾನೂ ಅವನಿಗೆ ನಡೆದುಕೊಳ್ಳುತ್ತ ಬಂದಿದ್ದೇನೆ. ಅವನ ಹಿರಿಮೆಯನ್ನು, ಅವನು ನಿಂತ ಬೆಟ್ಟದ ಹೆಗ್ಗಳಿಕೆಯನ್ನು ಹಾಡಿ ಹೊಗಳಿದ ಆಳ್ವಾರರ ಪಾಶುರಗಳನ್ನು ಓದಬೇಕೆಂಬ ತವಕ ನನ್ನಲ್ಲಿ ಮೂಡಿ ಬಂದುದು ಸೋಜಿಗವೇನಲ್ಲ.

ಕನ್ನಡದವನಿಗೆ ತಮಿಳೇನು ದೂರದ ನುಡಿಯೆ ? ಆದರೆ ಆಳ್ವಾರರ ಪ್ರಬಂಧಗಳು ಶಾಸ್ತ್ರಕ್ಕೆ ಸಮ. ಅದರ ಅರ್ಥಾನುಸಂಧಾನವಿರದೆ ಮನಸ್ಸಿನ ಸಂಸ್ಕಾರ ಆಗದು. ವೇಂಗಡದೊಡೆಯನಿಗೆ ಆಳ್ವಾರರು ಮಾಡಿರುವ ಮಂಗಳಾಶಾಸನ ಪಾಶುರಗಳನ್ನಾದರೂ ಸಂಪ್ರದಾಯದಂತೆ ಅಧ್ಯಯನ ಮಾಡಬೇಕೆಂಬ ಬಯಕೆಯಿಂದ ಹಿರಿಯರಾದ ಹೆಮ್ಮಿಗೆ ದೇಶಿಕಾಚಾರ್ಯರಲ್ಲಿ ಕೆಲಕಾಲ ಕ್ರಮವರಿತು ಕಲಿತದ್ದಾಯಿತು.

ಆಳ್ವಾರರ ಭಾವಬಂಧುರತೆ, ಅವರ ನುಡಿಗಟ್ಟಿನ ಸೊಗಸು, ಭಗವದ್ವಿಷಯದ ಸ್ವಾರಸ್ಯ ಇವೆಲ್ಲ ಮನಸ್ಸಿನಲ್ಲಿ ಮೂಡುವಂತೆ ಪಾಠ ಹೇಳಿದ ದೇಶಿಕಾಚಾರ್ಯರ ಪಾಂಡಿತ್ಯ, ಸೌಜನ್ಯ, ವಿನಯ, ಭಕ್ತಿ, ಭಾವುಕತೆ ಇವುಗಳಿಗೆ ಮಾರುಹೋದೆ. ನನ್ನ ಬಾಳಲ್ಲಿ ಅವರ ಸಂಪರ್ಕವೊಂದು ರಸಘಟ್ಟ.

ಮುಂದೆ, ಅವರು ತೀರಿಕೊಳ್ಳಲು ಅವರು ತೋರಿಸಿದ ದಾರಿಯನ್ನೇ ಹಿಡಿದು ಉಳಿದ ಪಾಶುರಗಳನ್ನು ನಾನಾಗಿ ವ್ಯಾಖ್ಯಾನ, ಅನುವಾದ, ನಿಘಂಟುಗಳ ನೆರವಿನಿಂದ ನನ್ನ ಶಕ್ತಿಯಿದ್ದಷ್ಟು ಓದಿಕೊಂಡೆ. ಅವುಗಳಲ್ಲಿ ನನಗೆ ತುಂಬ ಹಿಡಿಸಿದುವನ್ನು ನನ್ನ ಮನನಕ್ಕೆಂದು ಗುರುತುಮಾಡಿಕೊಂಡೆ. ಮತ್ತೆ ಮತ್ತೆ ಅವುಗಳನ್ನು ಓದುತ್ತ, ಅವನ್ನೇ ಕುರಿತು ಚಿಂತಿಸುತ್ತ ಇದ್ದಾಗ ಈ ಅನುವಾದದ ಬಯಕೆ ಮೂಡಿಬಂದಿತು. ಮೂಲದ ಮಾತು

ಗಳಿಗೆ ಹತ್ತಿರವಾಗಿ, ಮೂಲದ ಭಾವದ ಬೆನ್ನುಹಿಡಿದು ಪದ್ಯಾನುವಾದ ವನ್ನೇ ಮಾಡಬೇಕೆನಿಸಿತು. ಮಾಡತೊಡಗಿದೆ.

ಅವುಗಳಲ್ಲಿ ಎಪ್ಪತ್ತೈದು ಪದ್ಯಗಳು ಇಲ್ಲಿವೆ ; ಐವರು ಆಳ್ವಾರರ (ಮೊದಲ ಮೂವರು, ತಿರುಮಳಿಶೈ ಮತ್ತು ನಮ್ಮಾಳ್ವಾರ್) ಪ್ರಬಂಧ ಗಳಿಂದ ಆಯ್ದುಕೊಂಡುವು ; ಬಹುಮಟ್ಟಿಗೆ ವೇಂಗಡದೊಡೆಯನನ್ನೇ ಕುರಿತವು. ಈ ಪದ್ಯಗಳು ಮುಖ್ಯವಾಗಿ ಭಾವಾನುವಾದಗಳಾದರೂ ಮೂಲದ ಮಾತುಗಳನ್ನೂ ನಿರೂಪಣೆಯ ಕ್ರಮವನ್ನೂ ಸಾಧ್ಯವಾದ ಮಟ್ಟಿಗೂ ಉಳಿಸಿಕೊಳ್ಳಲು ಯತ್ನಿಸಿದ್ದೇನೆ.

ಈ ಪದ್ಯಗಳಿಗೆ ಗದ್ಯಾನುವಾದ, ಸಂಪ್ರದಾಯದ ವಿವರಣೆ ಮತ್ತು ಸ್ವತಂತ್ರವಾದ ವಿವೇಚನೆಗಳನ್ನು ಕೊಡುವ ಉದ್ದೇಶವಿದ್ದಿತು. ನಲವತ್ತಕ್ಕೂ ಮೀರಿ ಪದ್ಯಗಳಿಗೆ ಈ ಬಗೆಯ ಬಾಲವನ್ನು ಸೇರಿಸಿಯೂ ಆಗಿತ್ತು. ಆದರೆ ಮತ್ತೊಮ್ಮೆ ಅದನ್ನು ನೋಡಿದಾಗ ರಸಿಕರ ಮೇಲೆ ಈ ಹೊರೆಯನ್ನು ಹೊರಿಸಲೇಕೆ ಎನಿಸಿತು. ಹಾಗಾಗಿ ಇಲ್ಲಿ ಯಾವ ವ್ಯಾಖ್ಯಾನವೂ ವಿವರಣೆಯೂ ಇರದೆ ಬರಿಯ ಮೂಲ, ಪದ್ಯಾನುವಾದ ಮಾತ್ರ ಉಳಿದುಕೊಂಡುವು. ತೀರ ಅಗತ್ಯವೆನಿಸಿದ ಕೆಲವು ಕಡೆ ಅಗತ್ಯ ವಾದಷ್ಟೇ ಅಡಿಟಿಪ್ಪಣಿಗಳನ್ನು ಮಾತ್ರ ಸೇರಿಸಿದ್ದೇನೆ.

ಪದ್ಯಾನುವಾದವನ್ನು ಓದಿ, ಮೂಲದ ಕಡೆ ಕಣ್ಣನ್ನು ಹೊರಳಿಸಿ ಅದರ ಚೆಲುವನ್ನು ಅರಿತುಕೊಳ್ಳುವುದು ಸಾಧ್ಯವಾದರೆ ನಾನು ಕೃತಕೃತ್ಯ, ಧನ್ಯ. ಮೂಲವೇ ಬಹುಕಾಲ ಉಳಿಯುವ ಸಾಮಗ್ರಿ ; ಅನುವಾದ ಅದಕ್ಕೆ ಆಗಾಗ ಎತ್ತಿಹಿಡಿದ ಸಣ್ಣಸೊಡರು ಅಷ್ಟೆ. ಅದಕ್ಕೆ ಸ್ವತಂತ್ರವಾದ ಸತ್ತ್ವ ಸ್ವಲ್ಪವಾದರೂ ಇದ್ದೀತೋ ನಾನರಿಯೆ.

ತಮಿಳು ಮೂಲವನ್ನು ಕನ್ನಡ ಲಿಪಿಯಲ್ಲಿ ಕಾಣಿಸುವಾಗ ಕೆಲವು ತೊಡಕುಗಳಿವೆ. 'ಕ' ಎನ್ನುವ ಶಬ್ದ ತಮಿಳಲ್ಲಿ 'ಗ' ಎಂದೋ 'ಹ' ಎಂದೋ ತೋರಿಕೊಳ್ಳುತ್ತದೆ ; ನಾನು ಬಹುಮಟ್ಟಿಗೆ 'ಗ' ಕಾರವನ್ನೇ ಬಳಸಿದ್ದೇನೆ. ಹಾಗೆಯೇ ಕನ್ನಡದ ಮಾತಿಗೆ ಹೆಚ್ಚು ಹೊಂದುವಂತೆ 'ತ' ಕಾರವನ್ನು 'ದ' ಕಾರ ಮಾಡಿದ್ದೇನೆ. ತಮಿಳಿನ 'ಳ' ಎಂಬ ಅಕ್ಷರವಾಗಲೀ ಉಚ್ಚಾರಣೆಯಾಗಲೀ ಕನ್ನಡದಲ್ಲಿ ಇಲ್ಲ ; ಶಕಟರೇಫವೂ ಈಗ ಇಲ್ಲ.

ಅದನ್ನು ಬಿಟ್ಟಿದ್ದೇನೆ. ಸಂಯುಕ್ತಾಕ್ಷರಗಳನ್ನು ಬರೆಯುವ ಕ್ರಮವನ್ನೂ ಹೊಸಗನ್ನಡ ಧಾಟಿಗೆ ಹೊಂದಿಸಿಕೊಂಡಿದ್ದೇನೆ. ನಿದರ್ಶನಕ್ಕೆ ತಮಿಳಿನಲ್ಲಿ 'ವೇಣ್ಡುಮ್' ಎನ್ನುವುದು ಇಲ್ಲಿ 'ವೇಂಡುಂ' ಎಂದು ಕಾಣುತ್ತದೆ. ಒತ್ತಕ್ಷರಗಳಲ್ಲಿ ಬಹುವೇಳೆ ತಮಿಳಿನ ಪದ್ಧತಿಯನ್ನೇ ಹಿಡಿದು 'ವೇರ್‌ಪು' (ವೇರ್ಪು), 'ಶೀರ್‌ಕ್ಕುಂ' (ಶೀರ್ಕುಂ), 'ಅಮರ್‌ನ್ದು' (ಅಮರ್ಂದು) ಎಂದು ಮುಂತಾಗಿ ಬಳಸಿದ್ದೇನೆ.

ಅನುಬಂಧವಾಗಿ ಆಳ್ವಾರರನ್ನು ಕುರಿತ ಒಂದು ಪ್ರಬಂಧವನ್ನೂ ಬರೆದು ಸೇರಿಸಿದ್ದೇನೆ. ಆಳ್ವಾರರ ಪರಿಚಯ ಸಾಲದವರು ಅದನ್ನೇ ಮೊದಲು ಓದಿಕೊಂಡರೆ ಒಳ್ಳೆಯದು.

ಎಂದಿನಂತೆ ಮತ್ತೆ, ಮಿತ್ರರಾದ ಜಿ. ಕೆ. ಅನಂತರಾಮ್ ಅವರ ಉಪಕಾರ ಸ್ಮರಣೆ ಮಾಡಬೇಕು ; ಹಾಗೆ ಮಾಡಿದರೆ ಋಣವೇನು ತೀರುವುದಿಲ್ಲ, ಮನಸ್ಸಾದರೂ ಹಗುರವಾಗುತ್ತದೆ.

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಪ ರಿ ವಿ ಡಿ

				ಪುಟ
ಒಂದು	—	ಪೊಯ್‌ಗೈ ಆಳ್ವಾರರ ಮುದಲ್ ತಿರುವಂದಾದಿಯಿಂದ	—	2
ಎರಡು	—	ಪೂದತ್ತಾಳ್ವಾರರ ಇರಂಡಾಂ ತಿರುವಂದಾದಿಯಿಂದ	—	10
ಮೂರು	—	ಪೇಯಾಳ್ವಾರರ ಮೂನ್ರಾಂ ತಿರುವಂದಾದಿಯಿಂದ	—	18
ನಾಲ್ಕು	—	ತಿರುಮಳಿಶೈ ಆಳ್ವಾರರ ನಾನ್ಮುಗಂ ತಿರುವಂದಾದಿಯಿಂದ	—	34
ಐದು	—	ನಮ್ಮಾಳ್ವಾರರ ಪೆರಿಯ ತಿರುವಂದಾದಿಯಿಂದ	—	42
ಆರು	—	ನಮ್ಮಾಳ್ವಾರರ ತಿರುವಾಯ್ಮೊಳಿಯಿಂದ	—	48
ಅನುಬಂಧ	—	ಆಳ್ವಾರರನ್ನು ಕುರಿತು	—	55

ಆಳದಲಿ ಮುಳುಗಿಹರು ಸೂರಿಗಳು
ಅನುಭವದ ಕಡಲಿನಾಳದಲಿ
ಮುಗಿಲ ಬೆಳಗುವ ಮಣಿಗಳನೆ ಕಂಡು
ಒಡಲ ಹರುಷದ ನೂಲಿನಲಿ ಕೋದು
ಮಾಡಿಹರು ಮಂಗಳವ ಜಗದ ಜನಕೆಲ್ಲ

ಒಂದು

ಮುದಲ್ ತಿರುವಂದಾದಿ

(೧)

ಉಣರ್‌ವಾರ್ ಆರ್ ಉನ್ ಪೆರುಮೈ
ಊಳಿ ತೋರೂಳಿ
ಉಣರ್‌ವಾರ್ ಆರ್ ಉರುವಂ ತನ್ನೈ
ಉಣರ್‌ವಾರ್ ಆರ್
ವಿಣ್ ಅಹತ್ತಾಯ್ ಮಣ್ ಅಹತ್ತಾಯ್
ವೇಂಗಡತ್ತಾಯ್ ನಾಲ್ವೇದ—
ಪಣ್ ಅಹತ್ತಾಯ್, ನೀ ಕಿಡಂದ ಪಾಲ್ (೬೮)

(೨)

ಎಳುವಾರ್ ವಿಡೈಕೊಳ್ವಾರ್ ಈನ್‌ತುಳಾಯಾನೈ
ವಳುವಾವಹೈ ನಿನೈಂದು ವೈಹಲ್ ತೊಳುವಾರ್
ವಿನೈಚ್ಚುಡರೈ ನಂದುವಿಕ್ಕುಂ ವೇಂಗಡಮೇ
ವಾನೋರ್
ಮನಚ್ಚುಡರೈ ತೂಂಡುಂ ಮಲೈ (೨೬)

ಒಂದು

ಪೊಯ್‌ಗೈ ಆಳ್ವಾರರ ಮೊದಲ ಸಿರಿ ಅಂತಾದಿಯಿಂದ

(೧)

ಅರಿವವರು ಯಾರಯ್ಯ ಹಿರಿಮೆಯನು ನಿನ್ನ,
ಎಡೆಬಿಡದೆ ಹೆಣಗಾಡಿದರು ?
ಕಂಡರಿವವರು ಯಾರು ಎಲ್ಲಕ್ಕೆ ಮಿಗಿಲಾದ ರೂಪವನು
ನಿನ್ನದೇ ಆದುದನು ? ಅರಿವವರು ಯಾರು ?
ಬಾನೊಳಗಿರುವಿ, ಮಣ್ಣೊಳಗಿರುವಿ, ವೇಂಗಡದ ಮೇಲಿರುವಿ !
ವೇದನಾಲ್ಕರ ನುಡಿಯೊಳಗಡಗಿರುವಿ !
ಅರಿವರುಂಟೆ ನೀನುಪ್ಪವಡಿಸಿದ ಪಾಲ್ಗಡಲ ?

(೨)

ಮೇಲಕೇರುವವರು, ಬಿಡುಗಡೆಯ ಬಯಸುವವರು[1]
ಸೊಗಸಿನೀ ತುಳಸಿಮಾಲೆ ತೊಟ್ಟವನನ್ನೆ
ಎಡೆಬಿಡದೆ ನೆನೆದು ಎಂದೆಂದು ಬಗೆದು ಬರುವುದಿಲ್ಲಿಗೇ ವೇಂಗಡಕೆ !
ಒಡಲ ಪಾಪದ ಕಿಚ್ಚನಡಗಿಸುವುದು ಇದು
ಬಾನವರ[2] ಮನದ ಸೊಡರ ಬೆಳಗಿಸುವುದೀ ಬೆಟ್ಟ !

(1. ಮೋಕ್ಷಕಾಮಿಗಳು ; 2. ನಿತ್ಯಸೂರಿಗಳು, ಪರಮ ಪದವಾದ ವೈಕುಂಠದಲ್ಲಿ ಭಗವಂತನ ನಿತ್ಯಸೇವೆಯಲ್ಲಿ ತೊಡಗಿರುವ ಅನಂತ, ಗರುಡ, ವಿಷ್ವಕ್ಸೇನ ಮೊದಲಾದವರು)

(೩)

ಇಡಂದದು ಬೂಮಿ ಎಡುತ್ತುದು ಕುನ್ರಂ
ಕಡಂದದು ಕಂಜನ್ನೈ ಮುನ್ ಅಂಜ ಕಿಡಂದುದುವುಂ
ನೀರೋದಮ್ಮಾ ಕಡಲೇ ನಿನ್ರುದುವುಂ
ವೇಂಗಡಮೇ
ಪೇರೋದವಣ್ಣರ್ ಪೆರಿದು (೩೯)

(೪)

ಉಳನ್ ಕಂಡಾಯ್ ನಲ್‌ನೆಂಜೇ ಉತ್ತಮನ್
ಎನ್ರುಂ
ಉಳನ್ ಕಂಡಾಯ್ ಉಳ್ಳುವಾರ್ ಉಳ್ಳತ್ತು
ಉಳನ್ ಕಂಡಾಯ್
ವೆಳ್ಳತ್ತಿಲುಳ್ಳಾನುಂ ವೇಂಗಡತ್ತು ಮೇಯಾನುಂ
ಉಳ್ಳತ್ತಿಲ್ ಉಳ್ಳಾನ್ ಎನ್ರು ಓರ್ (೯೯)

(೫)

ವಹೈಯರು ನುಣ್ ಕೇಳ್ವಿ ವಾಯ್‌ವಾರ್‌ಗಳ್
ನಾಳುಂ
ಪುಗೈವಿಳಕ್ಕುಂ ಪೂವ್ ಪುನಲುಂ ಐಂದಿ
ದಿಶೈದಿಶೈಯಿಲ್
ವೇದಿಯರ್ಗ್ಗಳ್ ಶೆನ್ರು ಇರೈಂಜುಂ ವೇಂಗಡಮೇ
ವೆಣ್‌ಶಂಗಂ
ಊದಿಯವಾಯ್ ಮಾಲ್ ಉಹಂದ ಊರ್ (೩೭)

(ಇ)

ಹಿರಿಹಬ್ಬಿ ನೆರೆಬಂದ ಕಡಲಬಣ್ಣದ ಮೈಯುವನು
ಹಿಡಿದೆತ್ತಿದುದೊ[1] ನೆಲ ! ಎತ್ತಿಹಿಡಿದುದೋ[2] ಬೆಟ್ಟ !
ಕಡಿದೆಸೆದುದೋ ಅಂಜಿದ ಕಂಸನಸುವನ್ನ[3] ಹಿಂದೊಮ್ಮೆ !
ಉಪ್ಪವಡಿಸಿದುದೋ ಅಲೆಯೋಲೈಸುವ ಮಾಕಡಲು[4] !
ಎಲ್ಲಕ್ಕೆ ಹಿರಿದಾಗಿ ನಿಂತುದೋ ವೇಂಗಡವೆ !

(1. ವರಾಹಾವತಾರದಲ್ಲಿ ; 2. ಗೋವರ್ಧನೋದ್ಧರಣ ದಲ್ಲಿ ; 3. ಕೃಷ್ಣಾವತಾರದಲ್ಲಿ ; 4. ಕ್ಷೀರಸಾಗರ)

(ಳ)

ಬಾಳುವುದು ನಾವಿಂದು ಅವನಿಂದ, ಕಂಡೆಯಾ
ಹದವರಿತ ಮನವೆ ?
ಉಳಿಸಲೆಂದೇ ನಮ್ಮನೆಂದೆಂದು ಇರುವ ಉತ್ತಮನವ, ಕಂಡೆಯಾ ?
ನೆನೆದವರ ಮನದಲ್ಲೆ ಇರುವ, ನೀ ಕಾಣೆಯಾ ?
ಬಿಳಿಗಡಲಲ್ಲಿ ಪವಡಿಸಿರುವ, ವೇಂಗಡದಿ ನಿಂತಿರುವ ಆ ದೈವ
ನಮ್ಮೊಡಲ ಒಳಗಿರುವ, ತಿಳಿ !

(ಱ)

ದಾರಿಬೇರೆಯೊಂದನರಿಯದೆಲೆ, ನುಣುಪುನುಡಿವಿಡಿದು ದಿನದಿನವು
ಹೊಗೆ ಬೆಳಕು ಹೂ ನೀರುಗಳ ಕೈಕೊಂಡು
ದಿಶೆದಿಶೆಗಳಿಂದೈತಂದು
ವೇದವಾದಿಗಳು ಬಂದೊದಗುವುದು ವೇಂಗಡಕೇ !
ಬಿಳಿಶಂಖವ—
ನೂದುವ ಬಾಯ ದೈವ ನೆಲೆಗೊಂಡಿರುವ ಊರಃ !

(ನುಣುಪು ನುಡಿ = ನೀತಿಮಾರ್ಗ, ಶ್ರುತಿ ಸ್ಮೃತಿಗಳಲ್ಲಿ ಹೇಳಿರು ವುದು ; ಹೊಗೆ = ಧೂಪ ; ಬೆಳಕು = ದೀಪ ; ನೀರು = ಅರ್ಘ್ಯ ಪಾದ್ಯಗಳಿಗೆ)

(೬)

ಮನಮ್ಮಾಶು ತೀರುಂ ಆರು ವಿನ್ಯೈಯುಂ ಶಾರಾ
ದನಮಾಯು ತಾನೇ ಕೈಕೂಡುಂ ಪುನಮೋಯು
ಪೂಂ ತುಳಾಯಾನ್ ಅಡಿಕ್ಕೀ ಪೋತ್ತೋಡು ನೀರೇಂದಿ
ತಾಂ ತೊಳಾನಿರ್‌ಪರ್ ತಮರ್ (೪೩)

(೭)

ತೆಳಿದಾಹ ಉಳ್ಳತ್ತೈ ಶೆಮ್ ನಿರೀಇ ಜ್ಞಾನಂ
ತೆಳಿದಾಹ ನನ್ಗು ಉಣರ್‌ವಾರ್ ಶಿಂದೈ ಎಳಿದಾಹ
ತಾಯ್‌ನಾಡುಂ ಕನ್ರೇಪ್ಪೋಲ್
ತಣ್ ತುಳಾಯಾನ್ ಅಡಿಯೇ
ಪೋಯ್‌ನಾಡಿಕ್ಕೊಳ್ಳುಂ ಪುರಿಂದು (೩೦)

(೮)

ತಮರ್ ಉಹಂದದು ಎವ್ವುರುವುಂ ಅವ್ವುರುವುಂ ತಾನೇ
ತಮರ್ ಉಹಂದದು ಎಪ್ಪೇರ್ ಮತ್ತು ಅಪ್ಪೇರ್
ತಮರ್ ಉಹಂದು
ಎವ್ವಣ್ಣಂ ಶಿಂದಿತ್ತು ಇಮ್ಮೈಯಾದಿರುಪ್ಪರೇ
ಅವ್ವಣ್ಣಂ ಆಳಿಯಾನ್ ಆಮ್ (೪೪)

(೯)

ನಾಡಿಲುಂ ನಿನ್ ಅಡಿಯೇ ನಾಡುವನ್, ನಾಡೋರುಂ
ಪಾಡಿಲುಂ ನಿನ್ ಪುಹಳೇ ಪಾಡುವನ್
ಶೂಡಿಲುಂ
ಪೊನ್ನಾಳಿಯೆಂದಿನಾನ್ ಪೊನ್ನಡಿಯೆ ಶೂಡವೆರ್‌ಕು
ಎನ್ನಾಹಿಲ್ ಎನ್ನೇ ಎನಕ್ಕು (೮೮)

(೬)

ಮನದ ಕೊಳೆ ತೊಳೆಯುವುದು, ಕೂರಾದ ದುರಿತ ಬಳಿಸಾರದು
ಧನವೆಂಬಂತೆ ಒಲುಮೆ ತಾನಾಗಿ ಬಂದೊದಗುವುದು,
ತನ್ನಲ್ಲಿ ತಾನಿದ್ದು
ಹೂತುಳಸಿ ಮಾಲೆಯನು ತೊಟ್ಟವನಡಿಗಳಿಗೆ
ಹೂವನ್ನು ನೀರನ್ನು
ಆರೈದು ಎರೆಯುವರು ತಾವೆ ಒಲುಮೆಯುಳ್ಳವರು

(೭)

ಅತ್ತಿತ್ತ ಅಲೆಯದಲೆ ಒಡಲ ಒಂದೆಡೆ ನಿಲಿಸಿ, ಅರಿವು
ತಿಳಿಯಾಗಿ, ಆಳದಲಿ ಅರಿವವರ ಬುದ್ಧಿ ತೊಡಕಿಲ್ಲದೆಲೆ
ಸಾಗುವುದು ತಂಪುತುಳಸಿಯ ಮಾಲೆ ತೊಟ್ಟವನ ಅಡಿಯತ್ತ,
ತಾಯನರಸುತ್ತ ನೇರಾಗಿ ಬರುವ ಕರುವಂತೆ

(೮)

ತನ್ನವರು ಬಯಸಿ ಬಗೆದ ರೂಪವನೆ ತೊಡುವ ತಾನು,
ತನ್ನವರು ಇನಿದಾಗಿ ಕರೆದ ಹೆಸರೆ ತನದೆಂದು ಆಲಿಸುವ,
ತನ್ನವರು ಒಲುಮೆಯಲಿ
ಎಂತೆಂತು ನೆನೆನೆನೆದು ಭಾವಿಸುವರೊ ಅಂತಂತು
ತೋರಿಕೊಳುವ, ಚಕ್ರವನೆ ತೊಟ್ಟಿರುವ ಎಮ್ಮೊಡೆಯ !

(೯)

ಹಿಡಿದರೆ ನಿನ್ನಡಿಯನೇ ಹಿಡಿಯುವೆನು, ದಿನದಿನವು
ಹಾಡಿದರೆ ನಿನ್ನ ಹಿರಿಮೆಯನೆ ಹಾಡುವೆನು, ಮುಡಿಯುವೆನು
ಹೊನ್ನಚಕ್ರವನೆತ್ತಿಹಿಡಿದವನ ಹೊನ್ನಡಿಗಳನೆ,
ಮುಡಿಯುವ ಎನಗಿಲ್ಲಿ ಏನಾದರೇನು ?

(೧೦)

ಕುನ್ರಸ್ಸೈಯ ಕುತ್ತಂ ಶೆಯ್ಯಿನುಂ ಗುಣಂ ಕೊಳ್ಳುವರ್
ಇನ್ರು ಮುದಲಾಹ ಎನ್ ನೆಂಜೇ
ಎನ್ರುಮ್
ಪುರಸುರೈಯೋಯಾಯಿನುಂ ಪೊನ್ ಆಳಿಕ್ಕೈಯಾನ್
ಶಿರನ್ ಉರೈಯೋ ಶಿಂದಿತ್ತು ಇರು (೪೧)

(೧೧)

ಪಯರುಂ ಕರುಂಗಡಲೇ ನೋಕ್ಕುಂ ಆರು
ಒಣ್ ಪೂ ಉಯರುಂ ಕದಿರವನೇ ನೋಕ್ಕುಂ
ಉಯಿರುಂ
ದರುಮನೈಯೇ ನೋಕ್ಕುಂ, ಒಣ್‌ತಾಮರೈಯಾಳ್
ಕೇಳ್ವನ್
ಒರುವನೈಯೇ ನೋಕ್ಕುಂ ಉಣರ್‌ವು (೬೭)

(೧೨)

ಪುಹಳ್ವಾಯ್ ಪಳಿಪ್ಪಾಯ್ ನೀ ಪೂಮ್
ತುಳಾಯಾನೈ
ಇಹಳ್ವಾಯ್ ಕರುದುವಾಯ್ ನೆಂಜೇ
ತಿಹಳ್ ನೀರ್
ಕಡಲುಂ ಮಲೈಯುಂ ಇರು ವಿಶಂಬುಂ ಕಾತ್ತುಂ
ಉಡಲುಂ ಉಯಿರುಂ ಏತ್ತಾನ್ (೭೩)

(೧೦)

ಗುಡ್ಡದೊಲು ಮಾಡಿದರು ದೋಷವನು ಗುಣವೆಂದೆ ಎಣಿಸುವ
ಇದು ಮೊದಲಾಗಿ, ಎಲೆ ಮನವೆ ಎಂದೆಂದು
ಒಡಲಾಳದಲ್ಲಿ ಸುಳಿಯದಾ ನುಡಿಯು ನುಡಿದರೂ
ನೆನೆಯುತ್ತ ಇರು
ಹೊನ್ನಚಕ್ರವ ಹಿಡಿದವನ ದಿಟವನ್ನು

(೧೧)

ನೆರೆಯುಕ್ಕಿಬರುವ ಹಿರಿಗಡಲನ್ನೆ ಬಯಸುವುದು ತೊರೆ,
ಮೇಲುರಿವ ಸೂರ್ಯನನೆ ನೋಡಿ ಹಿಗ್ಗುವುದು ಹೂ,
ಸೇರುವುದು ಜೀವ
ಸಾವಿಗೊಡೆಯನಹ ಯಮಧರ್ಮನನೆ, ಚೆಂದಾವರೆಯುಲಿ
ನಿಂತವಳ ಗೆಳೆಯನೊಬ್ಬನನೆ
ಬಯಸುವುದು ಒಡಲೊಳಗಣ ಅರಿವು

(೧೨)

ಹಾಡಿ ಹೊಗಳುವೆಯೊ ಹಳಿಯುಡೆಯೊ ತುಳಸಿಯಮಾಲೆ
ತೊಟ್ಟವನನ್ನು,
ಕಡೆಗಣ್ಣಿಂದ ಕಾಣುವೆಯೊ ಆದರದಿ ಸೇರುವೆಯೊ
ಎಲೆ ಮನವೆ, ಹೊಳೆವ ನೀರ್
ಕಡಲು ಮಲೆಯಾಗಸವು ಗಾಳಿ ಒಡಲುಸಿರು ಎಲ್ಲವನು
ಎತ್ತಿನಿಲಿಸಿಹನವನೆ ದಿಟ !

ಎರಡು

ಇರಂಡಾಂ ತಿರುವಂದಾದಿ

(೧೩)

ಅವನ್ ಕಂಡಾಯ್ ನಲ್ ನೆಂಜೇ ಆರ್ ಅರುಳುಂ ಕೇಡುಂ
ಅವನ್ ಕಂಡಾಯ್ ಐಂಬುಲನಾಯ್ ನಿನ್ರಾನ್
ಅವನ್ ಕಂಡಾಯ್
ಕಾತ್ತು ತೀ ನೀರ್ ವಾನ್ ಕುರುವರೈ ಮಣ್
ಕಾರ್ ಓದಂ
ಶೀತ್ತಂ ತೀ ಆವಾನುಂ ಶೆನ್ರು (೨೪)

(೧೪)

ಮನತ್ತುಳ್ಳಾನ್ ವೇಂಗಡತ್ತಾನ್ ಮಾಕಡಲಾನ್
ಮತ್ತುಂ
ನಿನೈಪ್ಪರಿಯ ನೀಳ್ ಅರಂಗತ್ತು ಉಳ್ಳಾನ್
ಎನೈಪ್ಪಲರುಂ
ದೇವಾದಿದೇವನ್ ಎನಪ್ಪಡುವಾನ್,
ಮುನ್ನೊರುನಾಳ್
ಮಾ ವಾಯ್ ಪಿಳಂದ ಮಹನ್ (೨೮)

ಎರಡು

ಪೂದತ್ತಾಳ್ವಾರರ ಎರಡನೆಯ ಸಿರಿ ಅಂತಾದಿಯಿಂದ

(೧೩)

ಅವನಿಂದಲೆ, ಕಂಡೆಯಾ, ನಲ್ಮನವೆ, ತುಂಬುಕರುಣೆ, ಕೇಡು
ಅವನೆ, ಕಂಡೆಯಾ. ಇಂದ್ರಿಯಗಳೈದರಲಿ ನಿಂತವನು,
ಅವನೆ ಕಂಡೆಯಾ
ತಂಗಾಳಿ ಉರಿಬೆಂಕಿ ನೀರು ಬಾನು ಬೆಟ್ಟ ಮಣ್ಣು, ಕಗ್ಗಡಲನೇ
ಮುನಿಸಿಂದ ಸುಡುವ ಬಡಬಾನಲವೆ ಆದಾನು !
ಸೇರು ಅವನನ್ನೆ ಇನ್ನು.

(೧೪)

ಇರುವನೆನ್ನ ಮನದಲ್ಲೆ ವೇಂಗಡದವ, ಮಾಕಡಲಿನವ !
ಮತ್ತೆ
ಮಲಗಿದವ ಒಡಕಿರದ ಹರವು ರಂಗದಲಿ,
ಎನಿತೋ ಹಲರು
ದೇವರ ಮೇಲಣ ದೇವ ಎಂದು ಬಗೆದಿಹರು ನಿನ್ನ !
ಹಿಂದೊಂದು ದಿನ
ಅಸುರನ[1] ಬಾಯ ಸೀಳಿದ ಮಾಣಿ ನೀ ತಾನೆ !

(1. ಕೃಷ್ಣಾವತಾರದಲ್ಲಿ ಕೇಶಿಯೆಂಬ ಅಸುರನನ್ನು ಕೊಂದವ)

(೧೫)

ಮಹಿಳ್‌ನ್ದದು ಶಿಂದೈ ತಿರುಮಾಲೇ
ಮತ್ತು
ಮಹಿಳ್‌ನ್ದದು ಉನ್ ಪಾದಮೇ ಪೋತ್ತಿ
ಮಹಿಳ್‌ನ್ದದು
ಆಳಲ್ ಆಳಿ ಶಂಗಂ ಅವೈ ಪಾಡಿ
ಆಡುಂ
ತೋಳಿಲ್ ಆಹಂ ಶೂಳ್‌ನ್ದು ತುಣಿನ್ದು (೩೨)

(೧೬)

ತುಣಿಂದದು ಶಿಂದೈ ತುಳಾಯಲಂಗಲ್ ಅಂಗಂ
ಅಣಿಂದವನ್ ಪೇರ್ ಉಳ್ಳತ್ತು
ಪಲ್‌ಹಾಲ್ ಪಣಿಂದದುವುಂ
ವೇಯ್ ಪಿರಂಗು ಶಾರಲ್ ವಿರಲ್
ವೇಂಗಡವನ್ನೈಯೇ
ವಾಯ್ ತಿರಂಗಳ್ ಶೊಲ್ಲುಂ ವಹೈ (೩೩)

(೧೭)

ಉಳದು ಎನ್ರು ಇರುಮಾವಾರ್ ಉಂಡು ಇಲ್ಲೈ ಎನ್ರು
ತಳರ್‌ತಲ್ ಅದನರುಹುಂ ಶಾರಾರ್ !
ಅಳವರಿಯ
ವೇದತ್ತಾನ್ ವೇಂಗಡತ್ತಾನ್ ವಿಣ್ಣೋರ್ ಮುಡಿ ತೋಯುಂ
ಪಾದತ್ತಾನ್ ಪಾದಂ ಪಯಿನ್ರು (೪೫)

(೧೫)

ಹಿಗ್ಗಿತೆನ್ನ ಮನ ನೆನೆದು ನಿನ್ನ, ಓ ದೈವ !
ಮುಂದೆ,
ಹಿಗ್ಗಿದುದು ಮಾತು ನಿನ್ನಡಿಗಳನೆ ಹಾಡಿ ಹೊಗಳುತ್ತ !
ಹಿಗ್ಗಿತೋ
ಅರಿಯ ಮೇಲೆರಗುವ ಚಕ್ರವನು ಶಂಖವನು ಕೊಂಡಾಡಿ !
ಕುಣಿತದ
ಹೆಜ್ಜೆಯಲಿ ಹಿಗ್ಗಿತು ಮೈ ತನ್ನ ತಾನೆ ಮರೆತು !

(೧೬)

ನೆಲೆಗಂಡಿತು ಮನ, ಮೈತುಂಬ ತುಳಸಿಮಾಲೆಯ
ತೊಟ್ಟವನ ಹೆಸರನ್ನೆ ನೆನೆಯುವೆನೆಂದು !
ಹಲಕಾಲ ಅವನಡಿಗೆರಗಿದೆನು !
ಬೆಟ್ಟ ಬಿದಿರುಮೆಳೆ ಕವಿದಿದ್ದು ಬೆಳ್ಳಗೆ ಬೆಳಗುವ
ವೇಂಗಡದವ, ಅವನೊಬ್ಬನ
ತೀರನೇ ಹಾಡಿಹೊಗಳುವ ಬಗೆಯೇನೆಂದು
ಕಂಡುಕೊಂಡಿತು ಬಾಯಿ!

(೧೭)

ಉಳ್ಳವನೆಂದು ಅಬ್ಬರವೆ ? ಉಂಟು ಇಲ್ಲೆಂಬ
ಅಳಲು ಬಳಿಸಾರುವುದೆ ? ಕೊನೆಯರಿಯದ
ವೇದದ ವಿಷಯವಾದವನ, ವೇಂಗಡದಿ ನಿಂತವನ,
ಬಾನವರು ತಲೆವಾಗಿ ಓಲೈಸುವ ಅವನಡಿಗಳನೆ
ನಂಬಿ ಹಿಡಿದವಗೆ-

(೧೮)

ಅರುಳ್ ಪುರಿಂದ ಶಿಂದ್ಯೆ ಅಡಿಯಾರ್ ಮೇಲ್ ವೈತ್ತು
ಪೊರುಳ್ ತೆರಿಂದು ಕಾಣ್‌ಗುತ್ತ ಅಪ್ಪೋದು ಇರುಳ್ ಇರಿನ್ದು
ನೋಕ್ಕಿನೇನ್, ನೋಕ್ಕಿ ನಿನ್ನೈಂದೇನ್ ಅದು ಒಣ್‌ಕಮಲಂ
ಓಕ್ಕಿನೇನ್ ಎನ್ನೈಯುಂ ಅಂಗು ಓರ್‌ನ್ದು (೫೯)

(೧೯)

ಓರ್ ಉರುವನಲ್ಲೇ ಒಳಿ ಉರುವಂ
ನಿನ್ ಉರುವಂ
ಈರುರುವನ್ ಎನ್ಬರ್ ಇರು ನಿಲತ್ತೋರ್
ಓರ್ ಉರುವಂ
ಆದಿ ಆಮ್ ವಣ್ಣಂ ಅರಿಂದಾಲ್ ಅವರ್ ಕಂಡೀರ್
ನೀತಿಯಾಲ್ ಮಣ್‌ಕಾಪ್ಪಾರ್ ನಿನ್ರು (೬೦)

(೨೦)

ಇದು ಕಂಡಾಯ್ ನನ್ ನೆಂಜೇ ಇಪ್ಪಿರವಿಯಾವದು
ಇದು ಕಂಡಾಯ್ ಎಲ್ಲಾಂ ನಾಮ್ ಉತ್ತದು
ಇದು ಕಂಡಾಯ್
ನಾರಣನ್ ಪೇರ್ ಓದಿ ನರಕತ್ತು ಅರುಹು ಅಣೈಯಾ
ಕಾರಣಮುಂ, ವಲ್ಲೈಯೇಲ್ ಕಾಣ್ (೬೬)

(೨೧)

ಕಂಡೇನ್ ತಿರುಮೇನಿ ಯಾನ್ ಕನವಿಲ್ ಅಂಗು ಅವನ್ ಕೈ
ಕಂಡೇನ್ ಕನಲುಂ ಶುಡರಾಳಿ ಕಂಡೇನ್
ಉರುನೋಯ್ ವಿನೈ ಇರಂಡುಂ ಓಟ್ಟುವಿತ್ತು ಪಿನ್ನುಂ
ಮರುನೋಯ್ ಶೆರುವಾನ್ ವಲಿ (೬೭)

(೧೮)

ಕರುಣೆ ತುಂಬಿದ ಮನವನ್ನು ನಿನ್ನ, ಇರಿಸಿ ಈ ದಾಸನ ಮೇಲೆ
ಇವನೊಂದು ಹುರುಳೆಂದು ಕಂಡುಕೊಂಡಂದು ಹರಿಯಿತು ಇರುಳು!
ನೋಡಿದೆನು ನಾ ನಿನ್ನನಾಗ, ನೋಡಿ ನೆನೆದನು ನಿನ್ನಡಿದಾವರೆಯ.
ಬೇರೊಂದು ಎನ್ನಲಿ ಇರದೆಂದು ಸಲಿಸಿಕೊಂಡೆನು ನನ್ನನೇ ನಾನು !

(೧೯)

ಎನಬಹುದೇ ರೂಪ ನಿನಗೆ ಒಂದೆಂದು ?
ಬಯಸಿ ಬಂದವರು ಬಗೆದುದೆಲ್ಲವು ರೂಪವೇ ನಿನಗೆ !
ಹೇಳುವರು ಹರವಾದ ಈ ಇಳೆಯೊಳಿರುವ ಜನ ಪರತತ್ತ್ವ
ನೀನೆಂದು ! ಒಂದಾದ ಆ ರೂಪ
ಎಲ್ಲಕೂ ಆದಿ. ಭಕ್ತರಿಗೆ ಹದ ಎಂದರಿತವರು, ಕಂಡಿರಾ
ನೀತಿಯಲಿ ನಿಂತು ಭೂಮಿಯನು ಕಾಯುವರು !

(೨೦)

ಇದ ಕಂಡೆಯಾ, ನಲ್ಮನವೇ, ಈ ಭವದ ಬದುಕನ್ನು ?
ಇದ ಕಂಡೆಯಾ, ನಾವು ಪಡಕೊಂಡುದೆಲ್ಲವನು ? ಇದ ಕಂಡೆಯಾ
ಹಿಡಿದು ದೈವದ ಹೆಸರ ನರಕದ ಬಳಿ ಸುಳಿಯೆ ಎಂಬುದನು ?
ಕಾಣಬಲ್ಲೆಯೊ, ಕಾಣು !

(೨೧)

ಕಂಡೆನವನ ಸಿರಿಮೈಯು ನಾ ಕನಸಿನಲಿ,
ಆಗವನ ಕೈಯಲಿ ಕಂಡೆ
ಕೆಂಡದೊಲು ಕಂಗಳಿಸುವ ಚಕ್ರವನು ! ಕಂಡೆ
ಬಾಳಬೇಗೆಯನು ಪಾಪವನು ಎರಡನೂ ಹೊಡೆದಟ್ಟಿ ಮತ್ತೆ
ಬವಣೆಯನು ಬಡಿದೋಡಿಸುವ ಬಲವನ್ನು !

(೨೨)

ನೇರ್ನ್ದೇನ್ ಅಡಿಮೈ ನಿನ್ದೈನ್ದೇನ್ ಅದು ಒಣ್ ಕಮಲಂ
ಆರ್ನ್ದೇನ್ ಉನ್ ಶೇವಡಿಮೇಲ್ ಅನ್ಬಾಯ್
ಆರ್ನ್ದ
ಅಡಿಕ್ಕೋಲಂ ಕಂಡವರ್ಕು ಎನ್ಗೊಲೋ ಮುನ್ನೈ,
ಪಡಿಕ್ಕೋಲಂ ಕಂಡ ಪಹಲ್ (೮೦)

(೨೩)

ಪೋದು ಅರಿಂದು ವಾನರಂಗಳ್, ಪೂಂ ಶುನ್ನೈ ಪುಕ್ಕು
ಆಂಗು ಅಲರ್ನ್ದ
ಪೋದು ಅರಿಂದುಕೊಂಡು ಏತ್ತುಂ, ಪೋದು ಉಳ್ಳಂ
ಪೋದು
ಮಣಿ ವೇಂಗಡವನ್ ಮಲರಡಿಕ್ಕೇ ಶೆಲ್ಲ
ಅಣಿವೇಂಗಡವನ್ ಪೇರ್ ಆಯ್ನ್ದು (೮೧)

(೨೪)

ನವಿನ್ರುರೈತ್ತ ನಾವಲರ್ಹಳ್ ನಾಳ್ ಮಲರ್ ಕೊಂಡು
ಆಂಗೇ
ಪಯಿನ್ರದನಾಲ್ ಪೆತ್ತ ಪಯನ್ ಎನ್ಗೊಲ್
ಪಯಿನ್ರಾರ್ ತಮ್
ಮೆಯ್ ತವತ್ತಾಲ್ ಕಾಣ್ಬರಿಯ ಮೇಗಮಣಿವಣ್ಣನೈ
ಯಾನ್
ಎತ್ತವತ್ತಾಲ್ ಕಾಣ್ಬನ್ ಕೊಲ್ ಇನ್ರು (೮೨)

(೨೨)

ಪಡೆದೆ ಪಾದಸೇವೆಯನು, ನೆನೆದೆ ಸಿರಿಪಾದಕಮಲವನು
ಪೂರ್ಣನಾದೆನು ಇರಿಸಿ ಒಲುಮೆಯನು ಚೆಲುವಾದ ನಿನ್ನಡಿಗಳಲಿ
ಪರಿಪೂರ್ಣವಹ
ಪಾದದ ಚೆಲುವ ಕಂಡವರಿಗೆಂತು ಆಗುವುದೊ
ಮೈಯ ಚೆಲುವನೆ ಕಂಡ ಕಾಲದಲಿ ?

(೨೩)

ಬೆಳಗಾಯಿತೆಂದು ಕಪಿವಿಂಡು ಹೊಕ್ಕು ಹೂದೋಟಗಳನು
ಆಗ ಅರಳಿದ್ದ ಹೂಗಳನಾಯ್ದು ಸಲಿಸುವುವು ತಂದು !
ನೀನದನೆ ಮಾಡು, ಎನ್ನೊಡಲೇ
ಹೂಗಳನಣಿಗೊಳಿಸು
ವೇಂಗಡದವನಡಿದಾವರೆಗೆ ಸೇರುವೊಲು,
ಅಂದದ ವೇಂಗಡದಿ ನಿಂದವನ ಹೆಸರನ್ನೆ ಹಿಡಿದು !

(೨೪)

ಹಲಕಾಲ ಹಾಡಿ ಕಬ್ಬಿಗರು ಹೂಗಳನಾಯ್ದು
ಇರಿಸಿ ಅವನಡಿಮೇಲೆ
ನಂಬಿ ನಡಕೊಂಡು ಪಡೆದ ಫಲವೇನು ?
ಬಗೆಬಗೆಯ ಸಾಧಕರು ತಂತಮ್ಮ
ಮೈಯ ತಪದಿಂದ ಕಂಡರಿಯದಿಹ ಕಾರ್ಮೋಡಮಣಿ
ಬಣ್ಣದವನ, ನಾನಾವ
ತಪದ ಬಲದಿಂದ ಕಂಡುಕೊಂಡೆನೊ ಇಂದು !

ಮೂರು

ಮೂನ್ರಾಮ್ ತಿರುವಂದಾದಿ

(೨೫)

ಅಡಿವಣ್ಣಂ ತಾಮರೈ ಅನ್ರು ಉಲಹಂತಾಯೋನ್
ಪಡಿವಣ್ಣಂ ಪಾರ್‌ಕಡಲ್ ನೀರ್‌ವಣ್ಣಂ
ಮುಡಿವಣ್ಣಂ
ಓರ್ ಆಳಿವೆಯ್ಯೋನ್ ಒಳಿಯುಂ ಅಃದು ಅನ್ರೇ
ಆರ್ ಆಳಿಕೊಂಡಾರ್‌ಕು ಅಳಹು (೫)

(೨೬)

ಮಾರ್‌ಪಾಲ್ ಮನಂ ಶುಳಿಪ್ಪ ಮಂಗೈಯರ್ ತೋಳ್ ಕೈವಿಟ್ಟು
ನಾರ್‌ಪಾಲ್ ಮನಂ ವೈಕ್ಕ ನೊಯ್ವ್ವುದಾಂ
ನಾರ್‌ಪಾಲ
ವೇದತ್ತಾನ್ ವೇಂಗಡತ್ತಾನ್ ವಿಣ್ಣೋರ್ ಮುಡಿತೋಯುಂ
ಪಾದತ್ತಾನ್ ಪಾದಂ ಪಣಿನ್ದು (೧೪)

ಮೂರು

ಪೇಯಾಳ್ವಾರರ ಮೂರನೆಯ ಸಿರಿ ಅಂತಾದಿಯಿಂದ

(೨೫)

ಕೆಂದಾವರೆಯ ಬಣ್ಣ ಅಂದು ಲೋಕವನಳೆದವನ1 ಅಡಿ
ಸುತ್ತಿರುವ ಕಡಲ ನೀರಂತೆ ತಂಪು ಅವನ ಮೈಬಣ್ಣ,
ಮುಡಿಯು ಹೊಳವೋ
ಒಂದೆ ಗಾಲಿಯ ತೇರನೇರಿದವನ2 ತೆರ, ಅಂತೆಯೇ ಕಾಂತಿ !
ಅಂದದ ಚಕ್ರವನು ಕೈಗೊಂಡವನ ಚೆಂದ ಇದು !

(1. ತ್ರಿವಿಕ್ರಮನಾಗಿ 2. ಸೂರ್ಯ)

(೨೬)

ದೈವದ ಬಳಿ ಸುಳಿಯಲು ಮನ, ಕೈಬಿಟ್ಟು ಚೆನ್ನಿಯರ ತೋಳ
ವೇದದರ್ಥದಲ್ಲಿ ನೇರಾಗಿ ನಿಂತೀತು ಮನ ! ವೇದಾನಾಲ್ಕರ
ವಿಷಯುವೇ ವೇಂಗಡದವ ! ಬಾನವರ ಮುಡಿ ಮುಟ್ಟಿದವನಡಿಗಳನೆ
ನೆರೆನಂಬಿ (ದೈವದ ಬಳಿ
ಸುಳಿಯಲು ಮನ–)

(೨೭)

ಶೆನ್ರುನಾಳ್ ಶೆಲ್ಲಾದ ಶೆಂಗಣ್‌ಮಾಲ್ ಎಂಗಳ್‌ಮಾಲ್
ಎನ್ರುನಾಳ್ ಎನ್ನಾಳುಂ ನಾಳಾಗುಂ
ಎನ್ರುಂ
ಇರವಾದ ಎಂದೈ ಇಣೈ ಅಡಿಕ್ಕೇ ಆಳಾಯ್
ಮರವಾದು ವಾಳ್‌ತ್ತುಹ ಎನ್‌ವಾಯ್ (೧೭)

(೨೮)

ವಡಿವು ಆರ್ ಮುಡಿ ಕೋಟ್ಟಿ ವಾನವರ್‌ಗಳ್
ನಾಳುಂ
ಕಡಿಯಾರ್ ಮಲರ್‌ತೂವಿ ಕಾಣುಂ
ಪಡಿಯಾನೈ
ಶೆಮ್ಮೈಯಾಲ್ ಉಳ್ಳುರುಹಿ ಶೆವ್ವನೇ ನೆಜಂಮೇ
ಮೇಯ್‌ಮ್ಮೈಯೇ ಕಾಣವಿರಂಬು (೨೨)

(೨೯)

ವರುಂಗಾಲ್ ಇರುನಿಲನುಂ ಮಾಲ್ ವಿಶುಂಬುಂ ಕಾತ್ತುಂ
ನೆರುಂಗು ತೀ ನೀರ್ ಉರುವುಂ ಆನಾನ್
ಪೊರುಂದುಂ
ಶುಡರಾಳಿ ಒನ್ರು ಉಡೈಯಾನ್ ಶೂಳ್ ಕಳಲೇ
ನಾಳುಂ
ತೊಡರ್ ಆಳಿನೆಂಜೇ ತೊಳುದು (೨೪)

(೨೭)

ಹಿಂದಾಗಲಿ ಮುಂದಾಗಲಿ ಕೆಂದಾವರೆಗಣ್ಣಿನ ದೈವ ನಮ್ಮವನೆ
ಎಂದರಿತ ದಿನ ಎಂದಾಗಲಿ ಅದು ಶುಭದಿನವೆ !
ಎಂದೆಂದು
ಕುಂದದ ಎನ್ನೊಡೆಯನ ಅಡಿಗಳಿಗಾಳಾಗಿ
ಹಿಂದೆಗೆಯದೆ1 ಹೊಗಳಲಿ ಎನ್ನಯ ಬಾಯಿ !

(1. ಮರೆಯದೆ)

(೨೮)

ಬಾಗಿಸಿ ಚೆಂದದ ಮುಡಿಗಳ ಬಾನವರೆಲ್ಲರು ದಿನದಿನ
ಪೂಸುತ ಕಂಪಿನ ಹೂಗಳ ಸೇವೆಯ ಸಲಿಸುವ
ಸಿರಿಮೈಯವನನೆ
ನಂಬುತ, ಇರಿಸುತ ಒಲುಮೆಯ ದಾರಿಯುಲಡಿಯನು,
ಮನವೇ
ಬೇರೊಂದನು ಬಯಸದೆ1 ಸೇವಿಸಲಾಶಿಸು !

(1. ಮೆಯ್‌ಮೈಯೆ = ಯಥಾರ್ಥವಾಗಿ)

(೨೯)

ಮೇರೆಯುರಿಯುದ ಭೂಮಿ ತೀರವಿರದಿಹ ಆಗಸವು ಗಾಳಿ
ಮೇಲೇರಿಬರುವ ಉರಿ ನೀರು—ಎಲ್ಲವನು ತಾನೆ ಆಗಿಸುವ !
ನಿಂತವನು ಎಲ್ಲೆಲ್ಲು ನೆಲೆಯಾಗಿ
ಹಿಡಿದವನು ಎಣೆಯಿರದ ಸುಡುಚಕ್ರವನೆತ್ತಿ, ಹಿಡಿದಪ್ಪುವನು
ತನ ಭಕ್ತರನು
ಮುಂದೆಂದು ಹಿಡಿಯೆನ್ನ ಮನವೆ ಆಳದಲಿ ಅವನಡಿಯನ್ನು !

(೩೦)

ತಾನೇ ತನಕ್ಕು ಉವಮನ್ ತನ್ಉರುವೇ ಎವ್ವುರುವುಂ
ತಾನೇ ತವವುರುವುಂ ತಾರಕೈಯುಂ
ತಾನೇ
ಎರಿಶುಡರುಂ ಮಾಲ್‌ವರೈಯುಂ ಎಣ್‌ದಿಶೈಯುಂ
ಅಂಡತ್ತು
ಇರು ಶುಡರುಂ ಆಯ ಇರೈ (೩೮)

(೩೧)

ಇರೈಯಾಯ್ ನಿಲನಾಹಿ ಎಣ್‌ದಿಶೈಯುಂ ತಾನಾಯ್
ಮರೈಯಾಯ್ ಮರೈಪ್ಪೊರುಳಾಯ್ ವಾನಾಯ್
ಪಿರೈವಾಯ್‌ನ್ದ
ವೆಳ್ಳತ್ತರವಿ ವಿಳಂಗು ಒಲಿನೀರ್ ವೇಂಗಡತ್ತಾನ್
ಉಳ್ಳತ್ತಿನ್ ಉಳ್ಳೇ ಉಳನ್ (೩೯)

(೩೨)

ಉಳನ್ ಕಂಡಾಯ್ ನಲ್‌ನಂಜೇ ಉತ್ತಮನ್ ಎನ್ರುಂ
ಉಳನ್ ಕಂಡಾಯ್ ಉಳ್ಳುವಾರ್ ಉಳ್ಳತ್ತು
ಉಳನ್ ಕಂಡಾಯ್
ವಿಣ್ ಒಡುಂಗ ಕೋಡು ಉಯರುಂ
ವೀಂಗು ಅರವಿ ವೇಂಗಡತ್ತಾನ್
ಮಣ್ ಒಡುಂಗ ತಾನ್ ಅಳಂದ ಮನ್ (೪೦)

(೩೦)

ತನಗೆ ತಾನೆ ಉಪಮೆ ! ತನ್ನ ರೂಪಗಳೇ ಇರುವೆಲ್ಲ ರೂಪಗಳು,
ತಪಗೈದು ತಾರೆಗಳಾಗಿ ನಿಂತವರು ತನ್ನ ರೂಪಗಳೆ ತಾನೆ,
ಉರಿಬೆಂಕಿ ಹಿರಿಬೆಟ್ಟ ದಿಕ್ಕೆಂಟು !
ಅಂಡದೊಳಿರುವ
ಸೊಡರೆರಡು[1] ತಾನೆ ಆಗಿರುವ ನಮ್ಮೊಡೆಯ !

(1. ಬ್ರಹ್ಮಾಂಡದಲ್ಲಿರುವ ಸೂರ್ಯಚಂದ್ರರು)

(೩೧)

ಒಡೆಯನವ, ನೆಲದೊಳಗಡಗಿ ನಡೆಸುವ, ದಿಕ್ಕೆಂಟು ತಾನಾದವ,
ವೇದವನೆ ತಂದವ, ವೇದದಲಿ ನಿಂತವ, ಬಾನ ಉಸಿರಾದವ !
ಮುಗಿಲನೇರಕೆ ಹರಿವ
ನೀರನೆರೆಯಿಂದ ಉಲಿವ ನೀರಿಂದ ಮೆರೆವ ವೇಂಗಡದಲಿ ತಾ ನಿಂತವ
ಎನ್ನೊಡಲ ಒಳಗೇ ಉಳಿದಿರುವ !

(೩೨)

ಇರುವ, ಕಂಡೆಯಾ ನಲ್ಮನವೇ, ಮೇಲ್ಮೆಯ ದೈವ ! ಎಂದೆಂದು
ಇರುವ, ಕಂಡೆಯಾ, ನೆನೆದವರ ಮನದೊಳಗೆ ! ಇರುವ, ಕಂಡೆಯಾ
ಬಾನ ಬಾಗಿಸುವ ಬೆಟ್ಟಗಳ ಕೋಡಿಂದ
ಮೇಲಾಗಿ ಜಾರುನೀರುಗಳಿಂದ ಮೆರೆವ
ವೇಂಗಡದಲಿರುವ !
ಇಳೆಯನಡಗಿಸಿ ತಾನಳೆದ ನಿಡುದೈವ !

(೩೩)

ಕಾಣ್‌ಕಾಣ್ ಎನ ವಿರುಂಬುಂ ಕಣ್‌ಗಳ್
ಕದರಿಲಹು
ಪೂಣ್ ತಾರ್ ಅಹಲತ್ತಾನ್ ಪೊನ್‌ಮೇನಿ
ಪಾಣ್‌ಕಣ್
ತೊಳಿಲ್ ಪಾಡಿ ವಂಡು ಅರೈಯುಂ ತೊಂಗಲಾನ್
ಶೆಮ್‌ಪೊನ್
ಕಳಲ್ ಪಾಡಿ ಯಾಮ್ ತೊಳುದುಂ ಕೈ (೩೫)

(೩೪)

ಉಲಗಮುಂ ಊಳಿಯುಂ ಆಳಿಯುಂ
ಒಣ್ ಕೇಳ್
ಅಲರ್‌ಕದಿರುಂ ಶೆಮ್‌ತೀಯುಂ ಆವಾನ್
ಪಲಕದಿರ್‌ಗಳ್
ಪಾರಿತ್ತ ಪೈಂ ಪೊನ್‌ಮುಡಿಯಾನ್
ಅಡಿಯಿಣೈಕ್ಕೇ
ಪೂರಿತ್ತು ಎನ್‌ನೆಂಜೇ ಪುರಿ (೪೪)

(೩೫)

ಪೆರಿಯ ವರೈ ಮಾರ್‌ಪಿಲ್ ಪೇರ್ ಆರಂ ಪೂಂಡು
ಕರಿಯ ಮುಗಿಲ್ ಇಡೈ ಮಿನ್‌ಪೋಲ
ತಿರಿಯುಂಗಾಲ್
ಪಾಣ್ ಒಡುಂಗ ವಂಡು ಅರೈಯುಂ ಪಂಗಯಮೇ
ಮತ್ತು ಅವನ್ ತನ್
ನೀಳ್ ನೆಡುಂಕಣ್ ಕಾಟ್ಟುಂ ನಿರಂ (೫೫)

(೩೩)

ಕಾಣು ಕಾಣೆಂದು ಹಾತೊರೆಯುವುವು ಕಣ್ಗಳು
ಹೊಳೆವ
ಹೂಮಾಲೆಗಳನು ಒಡಲಲ್ಲಿ ತೊಟ್ಟಿರುವ ಸಿರಿಮೈಯನ್ನು !
ಇಂಪಾದ ದನಿಯಲ್ಲಿ
ಮೊರೆವ ದುಂಬಿಗಳು ಮುತ್ತಿರುವ ಹಾರವನು ಹೊತ್ತಿರುವ
ದೇವದೇವನ
ಚೆಲುವ ಪಾದಕ್ಕೆ ಹಾಡಿ ಕೈಜೋಡಿಸುವ ನಾವು !

(೩೪)

ಉಳಿವು1 ಅಳಿವು2 ಕಡಲು
ಚಂದದಿ ಬೆಳಗುವ
ಚಂದ್ರಸೂರ್ಯರು ಕೆಂಪುರಿಯು—ತಾನೆ ಆಗುವನೆಲ್ಲ !
ಹಲ ಹೊಳವುಗಳ
ಹರಿಸುತ್ತ, ಚೆಲುವಿನಾ ಹೊನ್ನಮುಡಿಯುವನ
ಅಡಿಗಳೆರಡಕ್ಕೆ
ಹರಿದೋಡು ಹಿಗ್ಗಿಂದ ಎಲೆ ಮನವೆ !

(1. ಉಲಗಂ = ಲೋಕ 2. ಊಳಿ = ಪ್ರಳಯ)

(೩೫)

ಹಿರಿಬೆಟ್ಟದೊಲು ಎದೆಹರವು, ಹೂಮಾಲೆಯದರ ಮೇಲೊಂದು
ಬಳುಕಿದರೆ
ಕಾರ್ಮೋಡಗಳ ನಡುವೆ ಸುಳಿಮಿಂಚಿನೊಲು ಬೆಳಗುವುದು !
ಉಳಿದೆಲ್ಲ ಸದ್ದನಡಗಿಸಿ ದುಂಬಿ ಮೊರೆವಾಗ
ನಮ್ಮೊಡೆಯನ
ನಿಡುಗಣ್ಣ ಬಣ್ಣ ತೋರುವುದು ತಾವರೆಯಂತೆ !

(೩೬)

ವಾಳುಂ ವಹ್ಯೆ ಅರಿಂದೇನ್ ಮ್ಯೈಪೋಲ್ ನೆಡುವರೈವಾಯ್
ತಾಳುಂ ಅರುವಿಪ್ಪೋಲ್ ತಾರ್‌ಕಿಡಪ್ಪ
ಶೂಳುಂ
ತಿರು ಮಾಮಣಿವಣ್ಣನ್ ಶೆಮ್‌ಕಣ್ ಮಾಲ್
ಎಂಗಳ್
ಪೆರುಮಾನ್ ಅಡಿ ಶೇರಪ್ಪೆತ್ತು (೫೯)

(೩೭)

ತಾಳ್ ಶಡೈಯುಂ ನೀಳ್ ಮುಡಿಯುಂ ಒಣ್ ಮಳುವುಂ
ಚಕ್ಕರಮುಂ
ಶೂಳ್ ಅರವುಂ ಪೊನ್‌ನಾಣುಂ ತೋನ್‌ಱುಂ ಆಲ್
ಶೂಳುಂ
ತಿರಂಡು ಅರವಿ ಪಾಯುಂ ತಿರುಮಲೈಮೇಲ್
ಎಂದೈಕ್ಕು
ಇರಂಡುರುವುಂ ಒನ್‌ರಾಯ್ ಇಶೈಂದು (೬೩)

(೩೮)

ಶಾರ್‌ನ್ದು ಅಹಡು ತೇಯ್‌ಪ್ಪ ತೆಡಾವಿಯು ಕೋಡು
ಉಚ್ಚಿವಾಯ್
ಊರ್‌ನ್ದಂ ಇಯಂಗುಂ ವೆಣ್ ಮದಿಯಿನ್ ಒಣ್
ಮುಯಲೈ ಶೇರ್‌ನ್ದು
ಶಿನಂ ವೇಂಗೈ ಪಾರ್‌ಕ್ಕುಂ ತಿರುಮಲೈಯೇ ಆಯನ್
ಪುನಂ ವೇಂಗೈ ನಾರುಂ ಪೊರುಪ್ಪು (೭೫)

(೩೬)

ಕರಿದಾದ ಹಿರಿದಾದ ಬೆಟ್ಟದೆರಡು ಕಡೆ
ಹರಿದುಬರುವಂತೆ ನೀರಧಾರೆ, ಮೈಮೇಲೆ ಮಾಲೆ !
ಅದಕೆ ಮನಸೋತು
ಸಿರಿದೇವಿ ಇಹಳಲ್ಲೆ ! ಮಣಿವಣ್ಣನವ, ಮುದ್ದುಕಣ್ಣನವ
ದೇವರ ದೇವನಡಿ ಸೇರಿ
ಅರಿತೆ ನಾ ಬದುಕ ಬಗೆಯನ್ನು !

(೩೭)

ತಳಕೆ ಕಟ್ಟಿದ ಜಡೆ, ಎತ್ತಿ ಬಿಗಿದ ಮುಡಿ, ಅಂದದ ಶೂಲ,
ಚಕ್ರ,
ನಡುವಿನಲಿ ಬಿಗಿದೊಂದು ಹಾವು ಹೊನ್ನದಾರ ! ಎಲೆಲೆ
ಸುತ್ತರಿವ
ನೆರೆ ಬಂದ ತೊರೆ ಹರಿಯುವಾ ತಿರುಮಲೆಯ ಮೇಲೆ
ಎನ್ನೊಡೆಯನಿಗೆ
ತೋರುವುದು ರೂಪ[1] ಎರಡೊಂದಾಗಿ ಸೇರಿ !

(1. ಶಿವ, ವಿಷ್ಣು ಇವೆರಡು ರೂಪ)

(೩೮)

ಬಳಿಸಾರ್ದು ತಳ ಹರವಾದ ಗಿರಿಯ ಕೋಡನುಜ್ಜುವ ತೆರ
ಬೆಳ್ ಚಂದಿರನೊಳಿಹ ಜಿಂಕೆ ಸುಳಿಸುಳಿದು ಬರೆ
ಅದ ಕಂಡು ಹುಲಿ ಹತ್ತಿರಕೆ ಹಾರಿ
ಮುಳಿಮುಳಿದು ನೋಡೆ, ಅದುವೆ ತಿರುಮಲೆಯು
ಗೊಲ್ಲನದೆ[1] ತಾಣ
ಬಗೆಬಗೆಯ ಹೂ ಗಮಗಮಿಸುವ ಮಲೆ

(1. ಕೃಷ್ಣ)

(೩೯)

ನೆಂಜಾಲ್ ನಿನ್ನೈಪ್ಪರಿಯನೇಲುಂ ನಿಲ್ಲೈಪೆತ್ತು
ಎನ್
ನೆಂಜಮೇ ಪಾಶಾಯ್ ನಿನ್ನೈಕ್ಕುಂಗಾಲ್
ನೆಂಜತ್ತು
ಪೇರಾದು ನಿರ್ಕುಂ ಪೆರುಮಾನ್ನೈ ಎನ್ಗೊಲೋ
ಓರಾದು ನಿರ್ಪದು ಉಣರ್ವು (೮೧)

(೪೦)

ಇನಿ ಅವನ್ ಮಾಯನ್ ಎನ ಉರೈಪ್ಪರೇಲುಂ
ಇನಿ ಅವನ್ ಕಾಣ್‌ಬರಿಯ ನೇಲುಂ
ಇನಿ ಅವನ್
ಕಳ್ಳತ್ತಾಲ್ ಮಣ್‌ಕೊಂಡು ವಿಣ್ ಕಡಂದ
ಪೈಂಕಳಲಾನ್
ಉಳ್ಳತ್ತಿನ್ ಉಳ್ಳೇ ಉಳ್ಳಾನ್ (೮೨)

(೪೧)

ಅದು ನನ್ರು ಇದು ತೀದು ಎನ್ರು ಐಯ್ಯಂಪಡಾದೇ
ಮದು ನಿನ್ರು ತಣ್ ತುಳಾಯ್ ಮಾರ್ವನ್
ಪೊದು ನಿನ್ರು
ಪೊನ್ ಅಮ್ ಕಳಲೇ ತೊಳುಮಿನ್ ಮುಳುವಿನ್ನೈಗಳ್
ಮುನ್ನಂ ಕಳಲುಂ ಮುಡಿಂದು (೮೮)

(೩೯)

ಅರಿಯಬಲ್ಲುದೆ ಮನ ಹಿರಿಮೆಯನವನ ?
ದಿಟ ! ಅಂತಾದರೂ ನೆಲೆಯನ್ನೇ ಅವನ
ನೆನೆದೆನ್ನ ಮನವೆ ನುಡಿ, ನೆನೆದರಾಯಿತು ಇನ್ನು ಮನದಲ್ಲೆ
ನೆಲೆಗೊಂಡು ನಿಲುವ ಹಿರಿಮೆಯುವ
ಏಕೆಂದು
ಸುಳಿಯದೋ ಅವನತ್ತ ಮನ ?

(೪೦)

ಈಗವನು ಮಾಯದವನೆಂಬೆಯೋ ?
ಈಗವನ ಕಾಣಲರಿಯೆವು ಎಂಬೆಯೋ ?
ಈಗವನು
ತುಡಗದಲಿ ನೆಲವನ್ನೆ ಪಡೆದು ಬಾನಲಿ ನಿಂತ
ಆ ಹಿರಿಹೆಜ್ಜೆಯುವ[1]
ನನ್ನೊಡಲ ಒಳಗಿರುವ ಎನ್ನೊಡೆಯ !

(1. ತ್ರಿವಿಕ್ರಮಾವತಾರ)

(೪೧)

ಅದು ಒಳಿತು ಇದು ಕೇಡು ಎಂದಿಂತು ಪರದಾಡದೆಲೆ
ದುಂಬಿ ತುಂಬಿರುವ ತುಳಸಿಮಾಲೆ ತೊಟ್ಟವನ,
ಎಲ್ಲರಿಗೆ ಹಿತವೆನಿಪ
ಹೊನ್ನಡಿಗಳನೆ ನಂಬಿ ಹಿಡಿಯಿರಿ ನೀವು ! ದುರಿತಗಳೆಲ್ಲ
ಮಡಿದು ಬೀಳುವುವು ಮುಂದಾಗಿ !

(௪௨)

ಕವಿಯಿನಾರ್ ಕೈಪುನೈಂದು ಕಣ್ ಆರ್ ಕಳಲ್ಪೋಯ್
ಶೆವಿಯಿನ್ ಆರ್ ಕೇಳ್ವಿಯರ್ಾಯ್ ಶೇರ್ನ್ದಾರ್
ಪುವಿಯಿನಾರ್
ಪೋತ್ತಿ ಉರೈಕ್ಕ ಪೊಲಿಯುಮೋ ಪಿನ್ನೈಕ್ಕಾಯ್
ಏತ್ತು ಉಯಿರೈ ಅಟ್ಟಾನ್ ಎಳಿಲ್ (௮௫)

(௪௩)

ಮುಡಿಂದ ಪೊಳುದಿಲ್ ಕುರವಾಣರ್ ಏನಂ
ಪಡಿಂದು ಉರುಶಾಲ್ ಪೈತಿನೈಗಳ್ ವಿತ್ತ, ತಂಡಿಂದು ಎಳುಂದ
ವೇಯ್ ಕಳೈ ಪೋಯ್ ವಿಣ್ ತಿರಕ್ಕುಂ
ವೇಂಗಡಮೋ
ಮೋಲೊರುನಾಳ್
ತೀಂಕುಳಲ್ ವಾಯ್ ವೈತ್ತಾನ್ ಶಿಲಂಬು (௮௯)

(௪௪)

ಇಡಂ ವಲಂ ಏಳ್ಪೂಂಡ ಇರವಿ ತೇರ್ ಓಟ್ಟಿ
ವಡಮುಹು ವೇಂಗಡತ್ತು ಮುನ್ನುಂ
ಕುಡಂ ನಯುಂದ
ಕೂತ್ತನಾಯ್ ನಿನ್ರಾನ್ ಕುರೈ ಕಳಲ್ ಕೂರುವದೇ
ನಾ ತನ್ನಾಲುಳ್ಳ ನಲಂ (௨௩)

(೪೨)

ಇನಿತಾಗಿ ಹಾಡಿ, ಕೈಮುಗಿದು, ಕಂಗಳವನಡಿ ಸೇರಿ
ಇಂಪಾದ ಕೇಳ್ಮೆಯನು ತುಂಬಿ ಕಿವಿತುಂಬ, ತಲೆಬಾಗಿ
ಜಗದ ಜನವೆಲ್ಲ
ಅವನನ್ನೆ ಹಾಡಿ ಹೊಗಳಿದರು ನಂಬಿದರು, ಸರಿದೂಗುವುದೆ
ಮನದನ್ನೆಗೆತ್ತ ಉಸಿರ ಅಟ್ಟಿದವನ[1] ಮೈಯ್ಮೆಯನು ?

(1. ನಪ್ಪಿನ್ನೈಪ್ಪಿರಾಟ್ಟಿಗಾಗಿ ವೃಷಭವನ್ನು ಕೊಂದವನು, ಕೃಷ್ಣ)

(೪೩)

ಮುಪ್ಪಡರಿ ಸಾವ ಬಳಿಸಾರ್ದ ಕುರುವ ಕಾಡಾಡಿಗಳು
ಹಂದಿ ಹೊಕ್ಕಾಡಿ ಉತ್ತ ನೆಲದಲ್ಲೆ ಬಿತ್ತುವರು ಬೆಳೆ !
ಹಂದಿ ನೆಲಬಗೆದು ಕಿತ್ತಾಡಿ ತಿಂದುಳಿದ ಬಿದಿರು ಕಳೆ
ಬೆಳೆಬೆಳೆದು ಬಾನುದ್ದ ನಿಂತಿರುವ ವೇಂಗಡವೆ ಹಿಂದೊಂದು ದಿನ
ಇನಿತಾದ ಕೊಳಲ ಬಾಯುಲಿಟ್ಟವನ ಬೆಟ್ಟ !

(೪೪)

ಎಡಬಲಗಳಲಿ ನಡೆಸುತ್ತ ಏಳು ತೇಜಿಗಳ ತೇರ
ನೇರಿದ ಸೂರ್ಯನನು
ಬಡಗದಿಕ್ಕಲಿ ಮೆರೆವ ವೇಂಗಡದಿ ನೆಲೆನಿಂತು,
ಒಲುಮೆಯಲಿ
ಕೊಡಕುಣಿತವನು ಕೈಗೊಂಡು ನಿಂತವನ
ಗೆಜ್ಜೆಯಡಿಗಳನು ಕೊಂಡಾವುದೆ
ತನಗೆಂದು ನಾಲಗೆಯು ತಾನಾಗಿ ಪಡಕೊಂಡ ಮೇಲ್ಮೆ[1]

(1. ಶ್ರೇಯಸ್ಸು, ನಿಧಿ)

(೪೫)

ಪೊಲಿಂದು ಇರುಂಡ ಕಾರ್ವಾನಿಲ್
ಮಿನ್ನೇಪೋಲ್ ತೋನ್ರಿ ಮಲಿಂದು ತಿರು ಇರುಂದ ಮಾರ್ವನ್
ಪೊಲಿಂದ ಗರುಡನ್ ಮೇಲ್ಕೊಂಡ ಕರಿಯಾನ್
ಕಳಲೇ ತೆರುಳ್ ತನ್ ಮೇಲ್ ಕಂಡಾಯ್ ತೆಳಿ (೫೭)

(೪೫)

ಮಳೆಗಾಲದೊಳು ಮಲೆತ ಮೋಡದಲಿ ಮಿಂಚು ತೋರುವ ತೆರ
ಬೆಳಗುವಳು ಸಿರಿಯುವನೊಡಲಲ್ಲಿ ! ಬಾನುದ್ದ ಬೆಳೆದ
ಗರುಡವನೇರಿನಿಂತ ಕರಿಮೈಯುವನ ಸಿರಿಪಾದಗಳೆ ವಿಷಯು
ತಿಳಿವಿಗೂ ಮಿಗಿಲಾದ ಒಲುಮೆಗೆ ದಿಟ !

ನಾಲ್ಕು

ನಾನ್ಮುಗನ್ ತಿರುವಂದಾದಿ

(೪೬)

ತೆರುಂಗಾಲ್ ದೇವನ್ ಒರುವನೇ ಎನ್ನು ಉರೈಪ್ಪರ್
ಆರುಂ ಅರಿಯಾರ್ ಅವನ್ ಪೆರುಮೈ
ಓರುಂ
ಪೊರುಳ್ ಮುಡಿವುಂ ಇತ್ತನೈಯೇ
ಎತ್ತವಂ ಶೆಯ್ದಾರ್ಕುಂ
ಅರುಳ್ ಮುಡಿವದು ಆಳಿಯಾನ್‌ಪಾಲ್ (೯)

(೪೭)

ನೀಯೇ ಉಲಗೆಲ್ಲಾಂ ನಿನ್ ಅರುಳೇ ನಿರ್ಪನವುಂ
ನೀಯೇ ತವತ್ತೇವದೇವನುಂ
ನೀಯೇ ಎರಿಶುಡರುಂ ಮಾಲ್‌ವರೈಯುಂ ಎಣ್ ದಿಶೈಯುಂ
ಅಂಡತ್ತು
ಇರುಶುಡರುಂ ಆಯ ಇವೈ (೧೦)

ನಾಲ್ಕು

ತಿರುಮಳಿಶೈ ಆಳ್ವಾರರ ನಾಲ್ಮೊಗನ ಸಿರಿ ಅಂತಾದಿಯಿಂದ

(೪೬)

ಮನಮಿಕ್ಕಿನೋಡೆ ದೇವನೊಬ್ಬನೆ ಎಂದು
ಅರಿತವರರುಹವರು
ಅರಿವವರು ಯಾರುಂಟು ಅವನ ಹಿರಿಮೆಯನು ? ಶಾಸ್ತ್ರಗಳ
ಹುರುಳೆಲ್ಲ ಮುಗಿವುದಿಷ್ಟರಲಿ ತಾನೆ ?
ಎಂತೆಂತು ತಪವ ಗೈದವರು
ಫಲವ ಕಾಂಬುದು ಚಕ್ರವನು ತೊಟ್ಟವನಲ್ಲೆ ತಾನೆ !

(೪೭)

ಲೋಕವೆಲ್ಲವು ನೀನೆ, ಲೋಕದ ನಿಲುಮೆ ನಿನ್ನೊಲುಮೆಯಲೆ !
ತಪಗ್ಗೈದು ದೇವರಾದರಿಗೆ ದೇವ ನೀನೆ,
ನೀನೆ, ಉರಿಬೆಂಕಿ ಹಿರಿಬೆಟ್ಟ ದಿಕ್ಕೆಂಟು
ಅಂಡದೊಳಗಣ
ಸೊಡರೆರಡು, ಎಲ್ಲವು ನೀನೆ ಆಗಿರುವಿ !

(೪೮)

ಕುರಿಪ್ಪು ಎನಕ್ಕು ಕೋಟ್ಟಿಯೂರ್ ಮೇಯಾನ್ನೈ ಏತ್ತ
ಕುರಿಪ್ಪು ಎನಕ್ಕು ನನ್ನೆಂಜೆಯಕ್ಕ ಪೆರುಪ್ಪನೋ
ವೇಂಗಡತ್ತು ಮೇಯಾನ್ನೈ ಮೇಯ್‌ವಿನೈ ನೋಯ್
ಎಯ್‌ದಾಮಲ್
ತಾನ್ ಕಡತ್ತುಂ ತನ್ ಮೈಯಾನ್ ತಾಳ್ (೩೪)

(೪೯)

ಅಳೈಪ್ಪನ್ ತಿರುವೇಂಗಡತ್ತಾನ್ನೈ ಕಾಣ
ಇಳೈಪ್ಪನ್ ತಿರುಕ್ಕೂಡಲ್ ಕೂಡ
ಮಳೈ ಪೇರ್
ಅರುವಿ ಮಣಿ ವರಂಡಿವಂದು ಇಳಿಯ ಆನ್ನೈ
ವೆರುವಿ ಅರವು ಒಡುಂಗುಂ ವೆರ್‌ಪು (೩೯)

(೫೦)

ವೇರ್‌ಪು ಎನ್ರು ವೇಂಗಡಂ ಪಾಡಿನೇನ್ ವೀಡು ಆಕ್ಕಿ
ನಿರ್‌ಕಿನ್ರೇನ್ ನಿನ್ರು ನಿನೈಕ್ಕಿನ್ರೇನ್
ಕರ್‌ಕಿನ್ರು
ನೂಲ್‌ವಲೈಯಿಲ್ ಪಟ್ಟಿರುಂದ
ನೂಲಾಟ್ಟಿ ಕೇಳ್ವನಾರ್
ಕಾಲ್‌ವಲೈಯಿಲ್ ಪಟ್ಟಿರುಂದೇನ್ ಕಾಣ್ (೪೦)

(೪೮)

ಎನಗಾಸೆ ಹಾಡಿ ಹೊಗಳಲು ಕೋಟ್ಟಿಯೂರಲಿ ನಿಂತ ದೇವನನು
ವೇಂಗಡದಿ ನೆಲೆಗೊಂಡ ದೈವವನು !
ಸಾಧಿಸಲು ಮನದಾಸೆ ಎನಗೀ ಸಂಧಿಯನು !
ಬಾಳ ಬವಣೆಯನು1 ಬೇನೆಯನು2 ಮೇಲೆರಗದೊಲು ಕಳೆವವನ3
ಅಡಿಗಳನೆಂತಾದರು ಮರೆಯುವೆನೊ ನಾನು ?

(1. ವಿನೈ = ಕರ್ಮಗಳನ್ನು, ಪಾಪಗಳನ್ನು ; 2. ನೋಯ್ = ನೋವು, ರೋಗ ; 3. ಮೂಲದಲ್ಲಿ 'ಇವು ಮೇಲೆರಗದಂತೆ ಹೋಗಲಾಡಿಸುವುದೇ ಸ್ವಭಾವವಾಗಿ ಉಳ್ಳವನ' ಎಯ್ದಾಮಲ್ ಕಡತ್ತುಂ ತನ್ಮೈಯಾನ್)

(೪೯)

ಬಾಯ್ದೆರೆದು ಕರೆಯುತಿಹೆ ಸಿರಿವೇಂಗಡದ ದೈವವನು
ಕಾಣುವೆನು ಎಂತೆಂದು
ಬರೆವೆ ಹರಕೆಯ ಗೆರೆಗಳನು ಕೂಡಿಕೊಳಲೆಂದೀ ಬೆಟ್ಟವನು !
ಹಿರಿಮಳೆಯಂತೆ
ಮೊರೆವ ನೀರ ಝರಿಯಲ್ಲಿ ಉರಿಮಣಿಗಳುಬ್ಬಿ ಹರಿದು ಬರೆ
ಅದ ಕಂಡು ಬೆದರಿ ಓಡಲು ಆನೆ, ಮಿಂಚೆಂದು ಹೆದರಿ
ಹೊಗೆ ಹುತ್ತದೊಳು ಹಾವು
ಆ ಬೆಟ್ಟವನು ನಾ ಕಾಣುವೆನು ಎಂದು ?

(೫೦)

ಬೆಟ್ಟವೆನೆ ವೇಂಗಡವೆ ! ಅದನೆ ಹಾಡಿ ಹೊಗಳಿದೆನು
ಅದೆ ಬಿಡುಗಡೆಗೆ ಎಡೆಯೆಂದು
ನಂಬಿ ನಿಂತಿಹೆನು, ನಿಂತು ನೆನೆಯುತಲಿಹೆನು ಕಲಿಯುತಲಿಹ
ವೇದದ ಬಲೆಯೊಳಗೆ ಹೊಳೆಯುವ ಸಿರಿದೇವಿಯೊಡೆಯು
ಅವನ ಕಾಲ ಬಳಿಗಳಲಿ ನಾ ಸಿಲುಕಿರುವೆ ಕಂಡಿರಾ !

(೩೧)

ಕಾಣಲ್ ಉರುಹಿನ್ರೇನ್ ಕಲ್ ಅರುವಿ ಮುತ್ತು ಉದಿರ
ಓಣವಿಳವಿಲ್ ಒಲಿ ಅದಿರ ಪೇಣಿ
ವರು ವೇಂಗಡವಾ ಎನ್ನುಳ್ಳಂ ಪುಹುಂದಾಯ್
ತಿರುವೇಂಗಡಮುದನ್ನೈ ಶೆನ್ರು (೪೧)

(೩೨)

ಪುರಿಂದು ಮಲರ್ ಇಟ್ಟು ಪುಂಡರೀಕಪ್ಪಾದಂ
ಪರಿಂದು ಪಡಕಾಡು ನಿರ್ಪ ತೆರಿಂದು ಎಂಗುಂ
ತಾನ್ ಓಂಗಿ ನಿರ್ಕಿನ್ರಾನ್ ತಣ್ ಅರುವಿ ವೇಂಗಡಮೇ
ವಾನೋರ್ಕ್ಕುಂ ಮಣ್ಣೋರ್ಕ್ಕುಂ ವೈಪ್ಪು (೪೩)

(೩೩)

ವೈಪ್ಪನ್ ಮಣಿವಿಳಕ್ಕಾಂ ಮಾಮದಿಯೈ
ಮಾಲಕ್ಕು ಎನ್ರು
ಎಪ್ಪೊಳುದುಂ ಕೈ ನೀಟ್ಟುಂ ಯಾನೈ ಎಪ್ಪಾಡುಂ
ವೇಡು ವಳೈಕ್ಕ ಕುರವರ್ ವಿಲ್ ಎಡಕ್ಕುಂ ವೇಂಗಡಮೇ
ನಾಡು ವಳೈತ್ತು ಆಡುದುಮೇಲ್ ನನ್ರು (೪೬)

(೫೧)

ಸುರಿಸುತ ಮಣಿಗಳ ಹರಿಯುತ ಕಲಕಲ
ಓಣದ ದಿನದೊಳು ಪಾಡುವ ಪದಗಳ
ಮಾರ್ದನಿಗೈಯಲು ತೊರೆಗಳು,
ಒಲುಮೆಯ ಬಂಟರು ನೆರೆಯುವ ವೇಂಗಡದವ
ದಿಟದಲಿ ಸೇರಿಹನೆನ್ನೊಳಗೆ !
ಆದರು ಕಾಣಲು ಕಾತರಗೊಂಡಿಹೆ
ಸಿರಿವೇಂಕಟಗಿರಿಯನೆ ನಾ ಸೇರಿ !

(೫೨)

ಬಯಸಿ ನಿನ್ನನೆ ಬಂದು ನಿನ್ನಡಿದಾವರೆಗಳಲಿ ಹೂವಿಟ್ಟು
ನಿನ್ನನೇ ಹಾಡಿ ಹೊಗಳುತ್ತ ನೆಲೆಗೊಂಡು
ಕಡಿದ ಮರ ಬಿದ್ದಲ್ಲೆ ಇರುವಂತೆ1 ನಿಲುವರಿಲ್ಲಿ !
ಹೊಳೆಯುತ್ತ ಎಲ್ಲೆಲ್ಲು, ನಿಂತಿರುವ ತಾನಿಲ್ಲಿ ಮೇಲಾಗಿ !
ತಂಪು ತೊರೆಗಳ ವೇಂಗಡವೆ
ಬಾನವರಿಗು ಬುವಿಯುವರಿಗು ಕಟ್ಟಿಟ್ಟ ಬುತ್ತಿ2 !

(1. ಜಡವಾಗಿ ; ಕಾಲ್ತೆಗೆಯಲು ಮನಸ್ಸು ಬಾರದೆ ;
2. ವೈಪ್ಪು=ನಿಧಿ)

(೫೩)

ಇಡುವೆ ಮಣಿದೀಪ ಚೆನ್ನಿಗ ಚಂದ್ರಮನನ್ನೆ
ಎನ್ನೊಡೆಯನಿಗೆಂದು ಎಂದೆಂದು ಕೈಯೆತ್ತಿ ನಿಂತಿರುವ ಆನೆಯನು
ಎಲ್ಲೆಡೆಗಳಿಂ ಸುತ್ತರಿಯೆ ಬೇಡರದ
ಕಂಡು ಕುರುವಜನ ಬಿಲ್ಲ ಕೈಕೊಂಡ ವೇಂಗಡವನ್ನೆ
ನಾಡವರೆಲ್ಲ ಸುತ್ತರಿದು ಕುಣಿದಾಡಲದು ಮೇಲು !

(೫೪)

ವೇಂಗಡಮೇ ವಿಣ್ಣೋರ್ ತೊಳುವದುವುಂ
ಮೇಯ್‌ಮ್ಮೃಯಾಲ್
ವೇಂಗಡಮೇ ಮೆಯ್ ವಿನ್ನೈನೋಯ್ ತೀರ್‌ಪದುವುಂ
ವೇಂಗಡಮೇ
ದಾನವರೈ ವೀಳ ತನ್ ಆಳಿಪ್ಪಡೈತೊಟ್ಟು
ವಾನವರೈ ಕಾಪ್ಪಾನ್ ಮಲೈ. (೪೮)

(೫೫)

ಅನ್‌ಬು ಆವಾಯ್ ಆರ್ ಅಮುದಂ ಆವಾಯ್ ಅಡಿಯೇನುಕ್ಕು
ಇನ್‌ಬು ಆವಾಯ್ ಎಲ್ಲಾಮುಂ ನೀ ಆವಾಯ್ ಪೊನ್‌ಪಾವೈ
ಕೇಳ್ವಾ ಕಿಳರ್ ಒಳಿ ಎಮ್ ಕೇಶವನೇ
ಕೇಡು ಇನ್ರಿ
ಆಳ್ವಾಯ್‌ಕ್ಕು ಅಡಿಯೇನ್ ನಾನ್ ಆಳ್ (೫೯)

(೫೬)

ತರ್‌ಪು ಎನ್ನೈ ತಾನ್ ಅರಿಯಾನೇಲುಂ
ತಡಂ ಕಡಲೈ
ಕಲ್‌ಕೊಂಡು ತೂರ್‌ತ್ತ ಕಡಲ್ ವಣ್ಣನ್
ಎನ್‌ಕೊಂಡ
ಎವ್ವಿನೈಯುಂ ನೀಂಗ ವಿಲಂಗಾ ಮನಂ ವೈತ್ತಾನ್
ವೆವ್ವಿನೈಯುಂ ಮಾಯುಂ ಮಾಲ್ ಕಂಡು (೬೭)

(೫೪)

ಬಾನವರು ಬಯಸಿ ಬರುವುದು ವೇಂಗಡಕೆ !
ಮೈಮೆಯಲಿ
ಪಾಪವನು ನೋವನ್ನು ಕಳೆವುದಿದು ವೇಂಗಡವೆ !
ದಿಟವಾಗಿ ವೇಂಗಡವೆ
ದಾನವರ ತೊಲಗಿಸಲು ತನ ಚಕ್ರವನೆ ತೊಟ್ಟು
ಬಾನವರ ಕಾಪಿಡುವ ಮಲೆಯುಹುದು !

(೫೫)

ಒಲುಮೆ ಮೈವೆತ್ತಿ ಬಂದವ, ಅಮೃತ ತುಂಬಿ ತುಳುಕುವವ,
ಈ ದಾಸನಿಗೆ
ಸುಖವನ್ನೆ ನೀಡುವವ, ಎಲ್ಲವೂ ಎನಗಾದವ,
ಸಿರಿದೇವಿಯು ಒಡೆಯನಹ
ಅವಳೊಡಗೂಡಿಯೆ ಬೆಳಗುವ ಕೇಶವನೆ,
ಕೇಡಿರದೊಂದು ಸೇವೆಯನಿತ್ತು ನೀ ಕಾಪಿಡುವೆ,
ನಿನ್ನಡಿಯಾಳು ನಾನು !

(೫೬)

ಎನ್ನೊಡಲ ಬಲ್ಲವನಲ್ಲ ತಾನು,
ಇಂತಾದರೂ ತೆಂಗಡಲನ್ನು ತುಂಬಿದಾ ಕಲ್ಲಿಂದ ಕಡಲ ಬಣ್ಣದವ
ಎನ್ನನೇ ಸುತ್ತರಿದ !
ಪಾಪಗಳನ್ನೆಲ್ಲ ತೊಳೆವಂತೆ ನಿಲಿಸಿಕೊಂಡನವ
ತನ್ನಲೇ ಎನ್ನ ಮನವ !
ಪಾಪಗಳೆಲ್ಲ ಮಾಯುವವು ಅವನ ಕಂಡು !

ಐದು

ಪೆರಿಯ ತಿರುವಂದಾದಿ

(೫೭)

ಯಾನುಂ ಎನ್‌ನೆಂಜುಂ ಇಶೈಂದೊಳಿಂದೋಮ್
ವಲ್‌ವಿನೈಯೈ
ಕಾನುಂ ಮಲೈಯುಂ ಪುಹಕ್‌ಕಡಿವಾನ್ ತಾನ್ ಒರ್
ಇರುಳ್ ಅನ್ನ ಮಾಮೇನಿ ಎಮ್ ಇರೈಯಾರ್ ತಂದ
ಅರುಳ್ ಎನ್ನುಂ ದಂಡಾಲ್ ಅಡಿತ್ತು (೨೬)

(೫೮)

ಉಣರ ಒರುವರ್‌ಕ್ಕು ಎಳಿಯನೇ ಶೆವ್ವೇ
ಇಣರುಂ ತುಳಾಯ್ ಅಲಂಗಲ್ ಎಂದ್ಯೆ
ಉಣರ
ತನಕ್ಕು ಎಳಿಯರ್ ಎವ್ವಳವರ್ ಅವ್ವಳವನ್ ಆನಾಲ್
ಎನಕ್ಕು ಎಳಿಯನ್ ಎಂಪೆರುಮಾನ್ ಇಂಗು (೨೯)

(೫೯)

ಇಂಗು ಇಲ್ಲೈ ಪಂಡುಪೋಲ್ ವೀತ್ತಿರುತ್ತಲ್
ಎನ್ನುಡೈಯ
ಶೆಮ್‌ಕಣ್ ಮಾಲ್ ಶೀರ್‌ಕ್ಕುಂ ಶಿರಿದು ಉಳ್ಳಂ ಅಂಗೇ
ಮಡಿ ಅಡಕ್ಕಿ ನಿರ್‌ಪದನಿಲ್ ವಲ್ ವಿನೈಯಾರ್
ತಾಮ್ ಈಂಡು
ಅಡಿಯೆಡುಪ್ಪದನ್ರೋ ಅಳಹು (೩೦)

ಐದು

ನಮ್ಮಾಳ್ವಾರರ ಹಿರಿಯ ಸಿರಿ ಅಂತಾದಿಯಿಂದ

(೫೭)

ನಾನು ನನ್ನ ಮನವು ಒಪ್ಪಿದೆವು ಇಬ್ಬರೊಂದಾಗಿ
ದುರುಳ ದುರಿತಗಳನೆಲ್ಲ
ಕಾಡಿಗಟ್ಟುವುದು ಬೆಟ್ಟಕ್ಕೆ ಎಂದು ! ತಾನಾಗಿ
ಇರುಳಂತೆ ಮೈವೆತ್ತು ಬಂದವನು ಇತ್ತಂಥ
ಅರುಳೆಂಬ[1] ದಂಡಿಗೆಯಿಂದ ಬಡಿದು !

(1. ಅರುಳ್ = ಕೃಪೆ)

(೫೮)

ಅರಿಯಬಲ್ಲರು ಯಾರು ನೇರಾಗಿ ಅವನನ್ನು,
ತೊಟ್ಟ ತುಳಸಿ ಮಾಲೆಯನೆ ಹಿರಿಹಿಗ್ಗಿಸುವ ದೈವವನು ?
ಅಂತಾದರೂ
ತನ್ನ ಭಕುತರ ಒಲುಮೆ ಎಂತೆಂತೊ ಅಂತಂತು ಒಲಿಯುವನು !
ಎಂತಲೇ ಎನ್ನೊಡೆಯನನು ನಾನರಿತೆನಿಂದು !

(೫೯)

ಈವರೆಗೆ ಎನ್ನೊಡಲಲ್ಲಿ ಒತ್ತಾಗಿ ತಂಗಿದ್ದ
ದುರಿತಗಳಿಗೆಡೆಯಿಲ್ಲ ಇನ್ನು !
ಎನ್ನನು ಕಂಡು ಕರುಣೆಯಲಿ
ಕೆಂಪಾದ ಕಣ್ಣವನ ಸಿರಿಗುಣಗಳೇ ಕಿಕ್ಕಿರಿದು ಎನ್ನೊಡಲ್ಲಿ
ನೆರೆದಿರಲು, ಇಷ್ಟು ದಿನ ಬೀಸಾಗಿ
ಬೆಳೆದಿದ್ದ ದೋಷಗಳಿನ್ನು ಮೈಮುದುರಿ ನಿಲ್ಲದೆಲೆ
ಇಲ್ಲಿಂದ ಕಾಲ್ತೆಗೆವುದೇ ಲೇಸು !

(೬೦)

ಪಾಲ್ ಆಳಿಂ ನೀ ಕಿಡಕ್ಕುಂ ಪಣೆಬೈ
ಯಾಮ್ ಕೇಟ್ಟ್ರೇಯುಂ
ಕಾಲ್ ಆಳುಂ ನೆಂಜು ಅಳಿಯುಂ ಕಣ್ ಶುಳಲುಂ
ನೀಲ್ ಆಳಿ
ಶೋದಿಯಾಯ್ ಆದಿಯಾಯ್ ತೊಲ್‌ವಿನ್ಯೆ
ಎಮ್‌ಪಾಲ್ ಕಡಿಯುಂ
ನೀದಿಯಾಯ್ ನಿನ್ ಶಾರ್‌ನ್ದು ನಿನ್ರು (೩೪)

(೬೧)

ಆಮ್ ಆರು ಅರಿವುಡ್ಯೆಯಾರಾವದು ಅರಿದನ್ರೇ
ನಾಮೋ ಅದು ಉಡ್ಯೆಯೋಮ್ ನಲ್‌ನೆಂಜೇ ಪೂಮೋಯ್
ಮದುಕರಂ ಮೇತಣ್ ತುಳಾಯ್ ಮಾಲಾರ್ಯೆ ವಾಳ್‌ತ್ತು ಅಮ್
ಅದು ಕರಮೋ ಅನ್‌ಬಾಲ್ ಅಮ್ಯೆ (೩೭)

(೬೨)

ನಾನ್ ಕೂರುಂ ಕೊತ್ತಾವದು ಇತ್ತನ್ಯೆಯೋ
ನಾಳ್‌ನಾಳುಂ
ತೇಂಗು ಓದಂ ನೀರ್ ಉರುವನ್ ಶೆಮ್‌ಕಣ್ ಮಾಲ್
ನೀಂಗಾದ
ಮಾಗತಿಯಾಂ ವೆಮ್ ನರಹಿಲ್ ಶೇರಾಮಲ್
ಕಾಪ್ಪದರ್‌ಕು
ನೀ ಗತಿಯಾಂ ನೆಂಜೇ ನಿನ್ಯೆ (೪೬)

(೬೦)

ಪಾಲ್ಗಡಲಲ್ಲಿ ನೀ ಪವಡಿಸಿದ ಪರಿ
ಕೇಳಿದರು ಕಿವಿಯಾರೆ
ನಡುಗುವುವು ಕಾಲ್ಗಳು, ಉಡುಗುವುದು ಮನ,
ಮೂಡುವುದು ಮಂಜು ಕಂಗಳಲಿ !
ನೀಲಗಡಲಬಣ್ಣ ಅದು ನಿನ್ನ ಮೈ, ಇನ್ನು ನೀ
ಎಂದೆಂದಿನ ದುರಿತಗಳ ಹೊಡೆದಟ್ಟುವವ !
ನಿನ್ನ ಬಳಿ ಸಾರ್ದುದ ನಿಂತು, ಕೇಳಿದರು ಕಿವಿಯಾರೆ
ಪಾಲ್ಗಡಲಲ್ಲಿ ನೀ ಪವಡಿಸಿದ ಪರಿ !

(೬೧)

ಪಡವುದತಿ ಕಷ್ಟ, ಹದವರಿತ ಅರಿವನ್ನು
ಆದರಿದ ಗಳಿಸಿಕೊಂಡೆವು ನಾವು ನಮಗಾಗಿ !
ಹೂಗಳಲಿ ಹಾರಾಡಿ
ದುಂಬಿಗಳು ಬಂದೊದಗುವುವು ತಂಪು ತುಳಸಿಯು ದಂಡೆಯಲಿ
ಅದ ತೊಟ್ಟಿರುವ ನನ್ನಯ್ಯನನು
ಹಾಡಿ ಹೊಗಳುವ ಕೆಲಸವೊಂದರಲೆ ನೆಲೆಗೊಂಡು
ನಿಲ್ಲಿನ್ನು ನಲ್ಮನವೆ !

(೬೨)

ನಾನೊರೆವ ನುಡಿ ನಿನಗಿಷ್ಟೆ
ದಿನದಿನವು !
ತಾ ತಂಗಿರುವ ಕಡಲ ನೀರಂತೆ ನೀಲಮೈಯುವನು
ಕೆಂದಾವರೆಯಂದದ ಕಣ್ಣವನು
ಅರಗಳಿಗೆ ಅಗಲಬಾರದ ದಿಕ್ಕೆಮಗೆ !
ನರಕವನು ಸೇರದೊಲು ಕಾಪಿಡುವ
ನೀನೆ ಗತಿ ! ನೆನೆ ಮನವೆ ನೀನದನು !

(೬೩)

ಪೇರ್‍ನ್ದ ಒನ್ರು ನೋಕ್ಕಾದು ಪಿನ್ ನಿರ್‍ಪಾಯ್
ನಿಲ್ಲಾಪ್ಪಾಯ್
ಈನ್ ತುಳಾಯ್ ಮಾಯನ್ನೈಯೇ ಎನ್‍ನೆಂಜೇ
ಪೇರ್‍ನ್ದ ಎಂಗುಂ
ತೊಲ್ಲೈವೆಮ್ ನರಹಿಲ್ ಶೇರಾಮಲ್ ಕಾಪ್ಪದರ್‍ಕು
ಇಲ್ಲೈ ಕಾಣ್ ಮತ್ತು ಓರ್ ಇರೈ (೬೦)

(೬೪)

ಕಲ್ಲುಂ ಕನೈ ಕಡಲುಂ ವೈಗುಂದಂ ವಾನ್ ನಾಡುಂ
ಪುಲ್ ಎನ್ರು ಒಳಿನ್ದನಕೊಲ್ ಏಪಾವಂ
ವೆಲ್ಲನೆಡಿಯಾನ್ ನಿರಂಕರಿಯಾನ್ ಉಳ್‍ಪುಗುಂದು
ನೀಂಗಾನ್ ಅಡಿಯೇನದು ಉಳ್ಳತ್ತು ಅಗಂ (೬೮)

(೬೫)

ಆಡರ್ ಪೊನ್ ಮುಡಿಯಾನೈ ಆಯಿರಂ ಪೇರಾನೈ
ಶುಡರ್‍ಕೊಳ್ ಶುಡರ್ ಆಳಿಯಾನೈ
ಇಡರ್ ಕಡಿಯುಂ
ಮಾತಾಪಿತುವಾಹ ವೈತ್ತೇನ್ ಎನದು ಉಳ್ಳೇ
ಯಾದು ಆಗಿಲ್ ಯಾದೇ ಇನಿ (೭೦)

(೬೬)

ಪುವಿಯುಂ ಇರುವಿಶುಂಬುಂ ನಿನ್ ಅಹತ್ತ
ನೀ ಎನ್
ಶೆವಿಯಿನ್ ವಳಿ ಪುಗುಂದು ಎನ್ ಉಳ್ಳಾಯ್
ಅವಿವು ಇನ್ರಿ
ಯಾನ್ ಪೆರಿಯನ್ ನೀ ಪೆರಿಯೈ ಎನ್‍ಬದನೈ
ಯಾರ್ ಅರಿವಾರ್
ಊನ್ ಪೆರುಹು ನೇಮಿಯಾಯ್ ಉಳ್ಳು (೭೫)

(೬೩)

ಬೇರೊಂದನೆಣಿಸದೆಲೆ ನಿಲ್ಲುವೆಯೊ ನಿಲ್ಲು
ತುಳಸಿಮಾಲೆಯ ತೊಟ್ಟಿರುವ ದೈವವನೆ ನೆರೆನಂಬಿ,
ನಂಬದೆಲೆ ಬಿಡುವೆಯೋ ಬಿಡು !
ಮೊದಲಿಲ್ಲ ಕೊನೆಯಿಲ್ಲ ಆ ನರಕಕ್ಕೆ, ಅದ ಸೇರದೊಲು
ಕಾಪಿಡಲು ನಮ್ಮ
ದೈವ ಬೇರೊಂದಿರದು ಕಂಡೆಯಾ ಮನವೆ !

(೬೪)

ಮಲೆಯು,[1] ಮೊರೆವ ಕಡಲು,[2] ಪರಮಪದ ವೈಕುಂಠ
ಹುಲ್ಲಂತೆ ಕೀಳಾಯಿತೇ ಎಲ್ಲ, ಪಾಪವೇ !
ಮುಗಿಲ ಮಟ್ಟಕೆ ಬೆಳೆದು ನಿಂತವ, ಕಾಡುಕಪ್ಪಿನ ಮೈಯವ ಅವ
ಎನ್ನೊಳಹೊಕ್ಕು ಕದಲದೆಲೆ
ಎನ್ನೊಡಲಲ್ಲೆ ಉಳಿದಿಹನಲ್ಲ !
(1. ತಿರುಮಲೆ, ವೇಂಗಡಬೆಟ್ಟ, ೨. ಕ್ಷೀರಸಮುದ್ರ)

(೬೫)

ಮೆರೆವ ಹೊನ್ನಮುಡಿಯುವನ, ಸಾಸಿರ ಹೆಸರವನ
ಬೆಳಕನೂ ಬೆಳಗುವ[1] ಸಿರಿಚಕ್ರವನೆ ಹಿಡಿದವನ
ಇಟ್ಟೆ ನಾನಿಂದು ಎನ್ನೊಡಲೊಳಗೆ, ಎಲ್ಲ ಬೇಗೆಯ ಕಳೆವ
ತಂದೆ ತಾಯೆಂದು ತಿಳಿದು !
ಎನಗಿನ್ನು ಏನಾದರೇನು ?
(1. ಸೂರ್ಯನಿಗಿಂತ ಹೆಚ್ಚು ಬೆಳಕಾದ)

(೬೬)

ಈ ಭೂಮಿ, ಆ ಮುಗಿಲು ಅಡಗಿಹವು ನಿನ್ನೊಳಗೆ, ನೀನೆನ್ನ
ಕಿವಿಯೊಳ ಹೊಕ್ಕು ಇರುವಿ ಎನ್ನೊಡಲಲ್ಲೆ
ದಿನವೊಂದು ಬಿಡದೆ ! ಹೀಗಿರಲು ಹಿರಿಯುವ ನಾನೆ ತಾನೆ ?
ನೀ ಹಿರಿಯ ಎಂದರಿವವರು ಯಾರು ?
ರಕ್ಕಸರ ಕತ್ತರಿಪ ಚಕ್ರವನ ತೊಟ್ಟವನೆ, ನೋಡು !

ಆರು

ತಿರುವಾಯ್‌ವೊಳಿ

(೬೭)

ಒಳಿವಿಲ್ ಕಾಲಮೆಲ್ಲಾಂ ಉಡನಾಯ್ ಮನ್ನಿ
ವಳುವಿಲಾವಡಿಮೈ ಶೆಯ್ಯವೇಂಡುಂ ನಾಮ್
ತೆಳಿ ಕುರಲರುವಿತ್ತಿರು ವೇಂಗಡತ್ತು
ಎಳಿಲ್ ಕೊಳ್ ಶೋದಿ ಯೆನ್‌ದೈ ತಂದೈ ತಂದೈಕ್ಕೇ (೩, ೧)

(೬೮)

ಅಣ್ಣಲ್ ಮಾಯನ್ ಅಣಿಕೊಳ್ ಶೆಂದಾಮರೈ
ಕ್ಕಣ್ಣನ್
ಶೆಂಗನಿವಾಯ್ ಕ್ಕರುಮಾಣಿಕ್ಕಂ
ತೆಣ್ಣಿರೈಚ್ಚುನೈನೀರ್ ತಿರುವೇಂಗಡತ್ತು
ಎಣ್ಣಿಲ್ ತೊಲ್‌ಪುಗಳ್ ವಾನವರೀಶನೇ (೩, ೩)

(೬೯)

ಈಶನ್ ವಾನವರ್‌ಕ್ಕು ಎನ್‌ಬೆನೆನ್ರಾಲ್ ಅದು
ತೇಶವೋ – ತಿರುವೇಂಗಡತ್ತಾನುಕ್ಕು
ನೀಶನೇನ್ ನಿರೈವೊನ್ರುಮಿಲೇನ್
ಎನ್‌ಗಣ್
ಪಾಶಂ ವೈತ್ತ ಪರಂಜುಡರ್ ಚ್ಚೋದಿಕ್ಕೇ (೩, ೪)

ಆರು

ನಮ್ಮಾಳ್ವಾರರ ಸಿರಿಬಾಯ ನುಡಿಯಿಂದ

(೬೭)

ಬಿಡುವಿಲ್ಲದೆಲ್ಲ ಕಾಲದೊಳು ಒಲುಮೆಯಲಿ ನೆಲೆನಿಂತು
ಎಡೆಬಿಡದೆ ಅವನಡಿಸೇವೆ ಗೈಯಲಿಬೇಕು ನಾವೆಲ್ಲ !
ಸಡಗರದಿ ಹರಿವ ತೊರೆಗಳಿಹ ಸಿರಿವೇಂಗಡದಿ
ನಿಡುನಿಂತು ನನ್ನೆಲ್ಲ ಹಿರಿಯರಿಗೆ ಬಾಳ ಬೆಳಕಾದವನ
ಅಡಿಸೇವೆಯನು ಮಾಡಲಿಬೇಕು !

(೬೮)

ನೀ ಒಡೆಯ, ಮಾಯದವ, ಚೆಂದದ ಮುಡಿಯವ,
ಕೆಂದಾವರೆಗಣ್ಣವ
ಕೆಂಪಡರಿದ ಬಾಯವ, ಕರಿಮಣಿ ಬಣ್ಣದ ಮೈಯವ,
ತಿಳಿಕೊಳಗಳು ಬೆಳಗುವ ಸಿರಿವೇಂಗಡದಲಿ ನಿಂತವ,
ಎಂದೆಂದು ಹಿರಿಯನಹ, ನೀ ಬಾನವರೊಡೆಯ !

(೬೯)

ಬಾನವರೊಡೆಯನೆನೆ, ಅದುವೆ ಬಯಕೆಯೋ
ಸಿರಿವೇಂಗಡದಿ ನಿಂತವಗೆ ?
ನಾ ನೀಚನು ತಾನೆ, ಮೇಲ್ಮೆಯ ಗುಣವೊಂದಿರದವ ತಾನೆ,
ಇಂತಾದರು ನನ್ನೊಳು
ಒಲುಮೆಯನ್ನಿಟ್ಟಿಹ ಈ ಬೆಳಕಿಗೆ ಹಿರಿಬೆಳಕಾದವ !

(೭೦)

ಶೋದಿಯಾಗಿ ಯೆಲ್ಲಾ ವುಲಗಂ ತೊಳುಂ
ಆದಿಮೂರ್ತಿಯೆನ್ರಾಲ್ ಅಳವಾಗುಮೋ ?
ವೇದಿಯರ್ ಮುಳುವೇದತ್ತಮುದತ್ತೈ
ತೀದಿಲ್ ಶೀರ್ ತಿರುವೇಂಗಡತ್ತಾನ್ನೈಯೇ (೩, ೫)

(೭೧)

ಶುಮನ್‌ದು ಮಾಮಲರ್ ನೀರ್ ಶುಡರ್ ದೂಪಂ ಕೊಂಡು
ಅಮರ್‌ನ್ದು ವಾನವರ್ ವಾನವರ್‌ಕೋನೊಡುಂ
ನಮನ್‌ರೆಳುಂ ತಿರುವೇಂಗಡಂ ನಂಗಟ್ಕು
ಶಮನ್‌ಕೊಳ್ ವೀಡು ತರುಂ ತಡಂಗುನ್ರಮೇ (೩, ೬)

(೭೨)

ಉಲಗಂ ಉಂಡ ಪೆರುವಾಯಾ ಉಲಪ್ಪಿಲ್ ಕೀರ್ತಿಯಮ್ಮಾನೇ
ನಿಲವುಂ ಶುಡರ್ ಶೂಳೊಳಿಮೂರ್ತಿ ನೆಡಿಯಾಯ್
ಅಡಿಯೇನ್ ಆರುಯಿರೇ
ತಿಲದಮುಲಗುಕ್ಕಾಯ್ ನಿನ್ರ
ತಿರುವೇಂಗಡತ್ತೆಂಬೆರುಮಾನೇ
ಕುಲತೊಲಡಿಯೇನುನಪಾದಂ
ಕೂಡುಮಾರು ಕುರಾಯೇ (೬, ೧೦, ೧)

(೭೦)

ಬೆಳಕಾಗಿ ಬೆಳಗಿಸುವೆ ಲೋಕವನೆಲ್ಲ ನಿನ್ನನು
ಆದಿಮೂರ್ತಿಯೆನಲದು ಹಿರಿಮೆಯು ಮಿರುವುದೊ ?
ವೇದವಾದಿಗಳ ವೇದವೆಲ್ಲದರ ಸಾರ ನೀನು
ಕುಂದೊಂದು ಇರದಂತೆ ಗುಣ ತುಂಬಿರಲು
ಸಿರಿವೇಂಗಡದಿ ನಿಂತವನೆ !

(೭೧)

ಒಲುಮೆಯಲಿ ಕೈಕೊಂಡು ಹಿರಿಹೂ ಕೈನೀರು ದೀಪಧೂಪಗಳನು
ನಲಿದು ಬಾನವರು ಬಂದು ದಂಡಿನೊಡೆಯನೊಡಗೂಡಿ[1]
ಮಣಿವ ಸಿರಿವೇಂಗಡವೆ ನಮಗೆಲ್ಲ
ನೆಮ್ಮದಿಯ ತರುವ ಹಿರಿಬೆಟ್ಟ !

(1. ದೇವತೆಗಳ ಸೇನಾನಿಯೆಂದಾದ ವಿಷ್ವಕ್ಸೇನ)

(೭೨)

ಲೋಕವನುಂಡ ಹಿರಿಬಾಯುವನೆ, ಎಂದೆಂದು ತೀರದಿಹ
ಕೀರ್ತಿಯುಳ್ಳವನೆ
ಮೇಲಸೊಡರಂತೆ[1] ಬೆಳಗುವ ಮೈಯುವನೆ, ಎನ್ನುಸಿರೆ,[2]
ಲೋಕಂಗಳಿಗೆ ತಿಲಕದೊಲು ನಿಂತ ಸಿರಿವೇಂಗಡದ ಹಿರಿದೈವವೆ
ನಿನ್ನಡಿಗಳನೆ ನಂಬಿದರು ಹಿರಿಯರೆನ್ನಯ ಕುಲದವರು,
ಅರುಹೀಗ ನಿನ್ನಡಿಗಳನೆ ನಾ ಕೂಡಿಕೊಳುವೆನೆಂತು !

(1. ಸೂರ್ಯ ; 2. ಆರ್ = ದುರ್ಲಭವಾದ ; ಉಯಿರ್ = ಪ್ರಾಣ)

(೭೩)

ವಣ್ಣಮರುಳ್ ಕೊಳಣಿಮೇಘವಣ್ಣಾ ಮಾಯವಮ್ಮಾನೇ
ಎಣ್ಣಂ ಪುಗುಂದು ತಿತ್ತಿಕ್ಕುಮಮುದೇ ಇಮೈಯೋರದಿಪತಿಯೇ
ತೆಣ್ಣಲರುವಿ ಮಣಿ ಪೊನ್ ಮುತ್ತಲೈಕ್ಕುಂ
ತಿರುವೇಂಗಡತ್ತಾನೇ
ಅಣ್ಣಲೇ ಉನ್ ಅಡಿ ಶೇರ ಅಡಿಯೇರ್ ಕಾವಾವೆನ್ನಾಯೇ
(೬, ೧೦, ೨)

(೭೪)

ವಂದಾಯ್ ಪೋಲೇ ವಾರಾದಾಯ್,
ವಾರಾದಾಯ್ ಪೋಲ್ ವರುವಾನೇ
ಶೆಂದಾಮರೈಕ್ಕಣ್ ಶೆಂಗನಿವಾಯ್ ನಾತ್ತೋಳಮುದೇ
ಯನದುಯಿರೇ
ಶೆಂದಾಮಣಿಗಳ್ ಪಗರಲ್ಲೈ ಪಗಲ್‌ಶೆಯ್
ತಿರುವೆಂಗಡತ್ತಾನೇ
ಅಂದೋ ಅಡಿಯೇನುನಪಾದಂ ಅಗಲಗಿಲ್ಲೇನಿರೈಯುಮೇ
(೬, ೧೦, ೯)

(೭೫)

ಅಗಲಗಿಲ್ಲೇ ನಿರೈಯುಂ ಎನ್ರು ಅಲರ್‌ಮೇಲ್ ಮಂಗೈ–
ಯುರೈಮಾರ್‌ಪಾ
ನಿಗರಿಲ್ ಪುಗಳಾಯ್ ಉಲಗಂ ಮೂನ್ರುಡೈಯಾ
ಯನ್ನೈಯಾಳ್ವಾನೇ
ನಿಗರಿಲಮರರ್ ಮುನಿಕ್ಕಣಂಗಳ್ ವಿರುಂಬುಂ ತಿರುವೇಂಗಡತ್ತಾನೇ
ಪುಗಲೊನ್ರಿಲ್ಲಾವಡಿಯೇನ್ ಉನ್ನಡಿಕ್ಕೀಳ್
ಮರ್‌ನ್ದು ಪುಗುನ್ದೇನೇ (೬, ೧೦, ೧೦)

(೭೩)

ಮೈಬಣ್ಣದಲಿ ಮರುಳುಮಾಡುವ ಮೇಘಬಣ್ಣದ ಓ ಮಾಯಾವಿ
ಭಕ್ತರೊಡಲನ್ನೆ ಹೊಕ್ಕು ಸುಖವ ತರುವಮೃತವೇ
ಅಮರರಿಗಧಿಪತಿಯೆ
ಮುತ್ತು ಮಣಿ ಹೊನ್ನ ಹೊತ್ತು ತರುವ ತೊರೆಗಳಿಹ
ಸಿರಿವೇಂಗಡದ ಓ ದೈವ,
ಅರುಹು ದಯಮಾಡಿ ಸೇರುವ ಬಗೆಯ ನಿನ್ನಡಿಗಳನು !

(೭೪)

ಬಂದಂತೆ ಇರಲಾಗಿ ಬಾರದೆ ಇರುವಿ1, ಬಾರದೆಲೆ ಇರಲಾಗಿ ಬರುವಿ2!
ಕೆಂದಾವರೆ ಕಣ್ಣವನೆ, ಕೆಂಪಡರಿದ ಬಾಯವನೆ,
ತೋಳ ನಾಲ್ಕರಮೃತವೆ ಎನ್ನುಸಿರೆ !
ಹೊಳೆವ ಚಿಂತಾಮಣಿ ಇರುಳ ಬೆಳಗಿಸುವ ಸಿರಿವೇಂಗಡದವನೆ,
ಓ, ಅಗಲಿರಲಾರೆ ನಿನ್ನಡಿಗಳನು ನಾನರಗಳಿಗೆ

(1. ಭಕ್ತರಲ್ಲದವರಿಗೆ ; 2. ಭಕ್ತರಿಗೆ)

(೭೫)

ಅಗಲಿ ಇರಲಾರೆ ಅರಗಳಿಗೆ ಎಂದೇ ಇಹಳು ಸಿರಿದೇವಿ
ನಿನ್ನೊಡಲಲ್ಲೆ
ಎಣೆಯಿರದ ಕೀರ್ತಿಯುವ, ಮೂರುಲೋಕಗಳೊಡೆಯ,
ಎನ್ನಾಳುವವ !
ಎಣೆಯಿರದಮರರು ಮುನಿಗಳು ನೆರೆಯುವ ಸಿರಿವೇಂಗಡದವ
ನೀನಲ್ಲದೆ ಪೊರೆಯಲು ಬೇರುಂಟೆ ? ನಿನ್ನಡಿಗಳಲೆ
ಬಾಗಿ ಹೊಕ್ಕಿರುವೆ !

ಅನುಬಂಧ

ಆಳ್ವಾರರನ್ನು ಕುರಿತು

'ಆಳ್‌ವಾರ್' ಎನ್ನುವ ತಮಿಳು ಮಾತಿಗೆ "ಆಳವಾಗಿ ಮುಳುಗಿರುವವರು" ಎಂದಷ್ಟೇ ಅರ್ಥ. ಭಗವದನುಭವವೆಂಬ ಕಡಲಲ್ಲಿ ಮುಳುಗಿ ತಳವನ್ನು ಮುಟ್ಟಿದವರೆಂದು ವಿವರಣೆ. ಭಗವದನುಭವವನ್ನು ಪಡೆದುಕೊಂಡು ಮೈಮರೆತ ಯಾವ ಸಂತನಿಗಾಗಲಿ ಈ ವಿಶೇಷಣ ಒಪ್ಪುವುದಾದರೂ ವಿಶೇಷವಾಗಿ ಶ್ರೀವೈಷ್ಣವ-ಸಂಪ್ರದಾಯದಲ್ಲಿ ಮಾನ್ಯರೆನಿಸಿದ ಹತ್ತು-ಹನ್ನೆರಡು ಮಂದಿ ಭಕ್ತ-ಕವಿಗಳನ್ನು ಈ ಹೆಸರಿನಿಂದ ಕರೆಯುವುದು ವಾಡಿಕೆ. ಇವರೆಲ್ಲ ತಮಿಳುನಾಡಿನ ಪ್ರಾಚೀನ ಸಂತರು; ಬೇರೆ ಬೇರೆ ಕಾಲದವರು, ಬೇರೆ ಬೇರೆ ಊರವರು, ಬೇರೆ ಬೇರೆ ಜಾತಿಯುವರು, ಬೇರೆ ಬೇರೆ ವೃತ್ತಿಗಳನ್ನು ಹಿಡಿದಿದ್ದವರು, ಬೇರೆ ಬೇರೆ ಮನೋವೃತ್ತಿಗಳನ್ನು ಪಡೆದಿದ್ದವರು. ಆದರೆ ಇವರೆಲ್ಲರಿಗೂ ಸಮಾನವಾಗಿದ್ದ ಧರ್ಮವೆಂದರೆ ಗಾಢವಾದ ವಿಷ್ಣುಭಕ್ತಿ; ಮತ್ತು ಅದಕ್ಕೆ ಹೊಂದಿಕೊಂಡು ಬಂದ ಅದ್ಭುತವಾದ ಕವಿತಾಶಕ್ತಿ.

ವಿಷ್ಣುಭಕ್ತರಾದರೂ ನಿರ್ದಿಷ್ಟವಾದ ಯಾವೊಂದು ಸಂಪ್ರದಾಯಕ್ಕಾಗಲೀ, ಪಂಥಕ್ಕಾಗಲೀ ಇವರು ಸೇರಿದ್ದಂತೆ ತೋರುವುದಿಲ್ಲ. ಶ್ರೀವೈಷ್ಣವ ಸಂಪ್ರದಾಯವೇನೋ ಇವರನ್ನು ತನ್ನವರೆಂದು ಗುರುತಿಸಿ ಆದರಿಸಿತು. ಆದರೆ ಅದು ನಡೆದದ್ದು ಅವರ ಕಾಲ ಮುಗಿದು ನೂರಾರು ವರ್ಷಗಳು ಕಳೆದ ಮೇಲೇ. ಅವರು ತಮ್ಮ ಕಾಲದಲ್ಲಿ ತಮಿಳುನಾಡಿನಲ್ಲೆಲ್ಲ ತಿರುಗಾಡುತ್ತ, ವಿಷ್ಣುಕ್ಷೇತ್ರಗಳಲ್ಲಿ ತಂಗಿ ಅಲ್ಲಿನ ಅರ್ಚಾಮೂರ್ತಿಗಳನ್ನು ಕಂಡಾಗ ತಮಗಾದ ಅನುಭವವನ್ನು, ತಮಗೊದಗಿದ ಭಾವನೆಗಳನ್ನು ಸರಳವಾದ ಮಾತಿನಲ್ಲಿ, ನೇರವಾದ ರೀತಿಯಲ್ಲಿ ಮನಮುಟ್ಟುವಂತೆ ಹಾಡಿದರು. ಅವರು ಹಾಡಿದ ಹಾಡುಗಳಲ್ಲಿ ಎದ್ದು ಕಾಣುವ ವಿವರಗಳೆಂದರೆ ಕ್ಷೇತ್ರವರ್ಣನೆ, ಉತ್ಸವವರ್ಣನೆ, ಪ್ರಕೃತಿವರ್ಣನೆ, ಅರ್ಚಾಮೂರ್ತಿಯ ವೈಭವ, ಬರಡು ಬಾಳುವೆಯ ಅಳಲು, ಭಕ್ತನ

ಕಾತರ, ಸಾಕ್ಷಾತ್ಕಾರದ ದಾರಿ, ಭಗವದನುಭವದಿಂದ ಬಂದ ಆನಂದ ಇವು. ಬಾಳಿಗೆ ಬೆಳಕನ್ನು ನೀಡುವಂಥ ಆಲೋಚನೆಗಳೂ ಇಲ್ಲಿವೆ. ಆದರೆ ಇಡೀ ಮಾನವ ಸಮುದಾಯಕ್ಕೆ ಸಮನಾಗಿಯೇ ಹೊಂದಿಕೊಳ್ಳುವ ಗುಣವನ್ನು ಇಲ್ಲಿ ಕಾಣುವೆವು.

ಇವರ ಕವಿತೆಗಳಲ್ಲಿ ಗೇಯಗುಣವೇ ಪ್ರಧಾನವಾಗಿರುವುದರಿಂದ, ಜನರು ಅವನ್ನು ಕ್ಷೇತ್ರಗಳಲ್ಲಿ, ಉತ್ಸವಸಂದರ್ಭಗಳಲ್ಲಿ, ಅರ್ಚಾಮೂರ್ತಿಗಳೆದುರು ಹಾಡಿಕೊಳ್ಳುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಈ ಕವಿತೆಗಳು ಉಳಿದುಕೊಂಡು ಬಂದುದೇ ಹೀಗೆ. ಅವರ ಹಿರಿಮೆಯನ್ನು ಪಂಡಿತ ವರ್ಗವೂ ಕಂಡುಕೊಂಡುದು ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯರಲ್ಲಿ ಮೊದಲಿಗರಾದ ನಾಥಮುನಿಗಳ ಕಾಲದಲ್ಲಿ, ಎಂದರೆ ಹತ್ತನೆಯ ಶತಮಾನದಲ್ಲಿ. ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯತ್ರಯರಲ್ಲಿ ಇವರು ಮೊದಲನೆಯವರು ; ಇವರ ಮಗ ಯಾಮುನಮುನಿಗಳು (ಆಳವಂದಾರ್ ಎಂದೂ ಇವರ ಹೆಸರು) ಎರಡನೆಯವರು ; ಯಾಮುನರ ಮೊಮ್ಮಗ ತಿರುಮಲೆ-ನಂಬಿ ಅಥವಾ ಶ್ರೀಶೈಲಪೂರ್ಣರ ಸೋದರಳಿಯ ರಾಮಾನುಜರು (೧೦೧೭-೧೧೩೭) ಮೂರನೆಯವರು.

ನಾಥಮುನಿಗಳು ಆಳ್ವಾರರ ಹಿರಿಮೆಯನ್ನು ಅರಿತುಕೊಂಡ ವಿಚಾರವಾಗಿ ಕಥೆಯೊಂದಿದೆ. ನಾಥಮುನಿಗಳು ಈಗಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ವೀರನಾರಾಯಣಪುರದವರು ; ಸಂಸ್ಕೃತದಲ್ಲಿ ವಿದ್ವಾಂಸರು, ಶಾಸ್ತ್ರವನ್ನೆಲ್ಲ ಚೆನ್ನಾಗಿ ಅಭ್ಯಾಸ ಮಾಡಿದ್ದವರು, ಯೋಗಿಗಳು. ನಾಡಲ್ಲೆಲ್ಲ ಸುತ್ತಾಡಿ ಊರಿಗೆ ಹಿಂದಿರುಗಿ ನೆಲೆಸಿದ್ದರು. ಒಂದು ದಿನ ಊರ ಗುಡಿಯಲ್ಲಿ ಯಾರೋ ಇಬ್ಬರು ಪರವೂರ ವೈಷ್ಣವರು ದೇವರೆದುರು ತಮಿಳು ಹಾಡುಗಳನ್ನು ಹಾಡುತ್ತಿದ್ದುದನ್ನು ಕೇಳಿದರು. ಹಾಡುಗಳ ಇಂಪು, ಮಾತುಗಳ ಸೊಗಸು, ಸಾಹಿತ್ಯದ ಭಾವಪುಷ್ಟಿ, ಭಕ್ತಿಯ ಹೊನಲು ಇವನ್ನೆಲ್ಲ ಗಮನಿಸಿ ಕುತೂಹಲವನ್ನು ತಳೆದು ಆ ಹಾಡುಗಳನ್ನು ರಚಿಸಿದವರು ಯಾರೆಂದೂ ಅವರ ಇನ್ನಷ್ಟು ಹಾಡುಗಳನ್ನು ಹಾಡುವಂತೆಯೂ ಕೇಳಿಕೊಂಡರು. ವೈಷ್ಣವರು ಆ ಹಾಡುಗಳು ನಮ್ಮಾಳ್ವರರೆಂಬುವರು ರಚಿಸಿದ ಪಾಶುರಗಳೆಂದೂ, ಅವನ್ನು ತಾವು ಕುಂಭಕೋಣದ ನೆರೆಯಲ್ಲಿ ತಿರುಕ್ಕುಡಂದೈ ಎಂಬ ಊರಿನ ಆರಾವಮುದನ್ ದೇವರ ಸನ್ನಿಧಿಯಲ್ಲಿ ಹಾಡುತ್ತಿದ್ದುದನ್ನು ಕೇಳಿ ಕಲಿತೆವೆಂದೂ, ಅಷ್ಟಕ್ಕಿಂತ ಹೆಚ್ಚು ಹಾಡುಗಳು ತಮಗೆ ಬಾರವೆಂದೂ ತಿಳಿಸಿದರು. ಹೀಗೆ ನಾಥಮುನಿಗಳ ಒಡಲನ್ನು

ಮರುಳುಮಾಡಿದ ಪಾಶುರ "ಆರಾವಮುದೇ ಅಡಿಯೇನುಡಲಂ ನಿನ್ ಪಾಲನ್ಬಾಯೇ" ಎಂದು ಮೊದಲಾಗುತ್ತದೆ.

ಈ ಪಾಶುರಗಳ ಬೆನ್ನಟ್ಟಿ ನಾಥಮುನಿಗಳು ಕುಂಭಕೋಣಕ್ಕೆ ಹೋದರು. ಅಲ್ಲಿ ತಿರುಕ್ಕುಡಂದೈ ಗುಡಿಯಲ್ಲಿ ಅವರಿಗೆ ಹತ್ತು ಪಾಶುರಗಳು ದೊರೆತವು; ಉಳಿದವನ್ನು ಪಡೆಯಬೇಕೆಂದರೆ ನಮ್ಮಾಳ್ವಾರರ ತೌರೂರಾದ ತಿರುಕ್ಕುರುಗೂರಿಗೇ (ಆಳ್ವಾರ್ ತಿರುನಗರಿಗೇ) ಹೋಗಬೇಕೆಂದೂ ತಿಳಿಯಿತು. ನಾಥಮುನಿಗಳು ಆ ಊರಿಗೂ ಹೋದರು. ಅಲ್ಲಿ ಹಲವು ಪಾಶುರಗಳನ್ನು ಬಲ್ಲ ಪರಾಂಕುಶದಾಸರೆಂಬುವರನ್ನು ಕಂಡರು. ನಮ್ಮಾಳ್ವಾರರ ಶಿಷ್ಯರಾಗಿದ್ದ ಮಧುರ-ಕವಿಯಾಳ್ವಾರರ ಸೇವೆಯನ್ನು ಮಾಡಿದ್ದವರು ಪರಾಂಕುಶದಾಸರು. ಆದರೆ ಅವರಿಗೆ ನಮ್ಮಾಳ್ವಾರರ ರಚನೆಗಳೆಲ್ಲದರ ಪರಿಚಯವಿರಲಿಲ್ಲ. ನಾಥಮುನಿಗಳ ಕುತೂಹಲವನ್ನೂ ಆದರವನ್ನೂ ಅಧಿಕಾರವನ್ನೂ ಅರಿತುಕೊಂಡು ದಾಸರು ತಮ್ಮ ಗುರುಗಳಾದ ಮಧುರಕವಿಯಾಳ್ವಾರರ "ಕಣ್ಣಿನುಣ್ ಶಿರುತ್ತಾಂಬಿನಾಲ್" ಎಂದು ಮೊದಲಾಗುವ ಹನ್ನೊಂದು ಪಾಶುರಗಳನ್ನು ಅವರಿಗೆ ಹೇಳಿಕೊಟ್ಟು, ಅವನ್ನು ಹನ್ನೆರಡು ಸಾವಿರ ಬಾರಿ ಪಠಿಸಿದರೆ ನಮ್ಮಾಳ್ವಾರರ ಅನುಗ್ರಹವಾಗುವುದೆಂದು ಸೂಚಿಸಿದರು.

ಯೋಗಿಗಳಾದ ನಾಥಮುನಿಗಳು ನಮ್ಮಾಳ್ವಾರರನ್ನೇ ಧ್ಯಾನಿಸುತ್ತ ಈ ಪಾಶುರಗಳನ್ನು ಪುರಶ್ಚರಣ ಮಾಡಿದಾಗ ನಮ್ಮಾಳ್ವಾರರ ಚೇತನ ಅವರೆದುರು ಕಾಣಿಸಿಕೊಂಡು ತಿರುವಾಯ್ಮೊಳಿಯ ಒಂದು ಸಾವಿರ ಪಾಶುರಗಳನ್ನು ತಿಳಿಯಹೇಳಿತು. ಏಕಸಂತಗ್ರಾಹಿಗಳಾಗಿದ್ದ ನಾಥಮುನಿಗಳು ಅವನ್ನೆಲ್ಲ ಒಡನೆಯೇ ಮನದಟ್ಟುಮಾಡಿಕೊಂಡರು. ನಮ್ಮಾಳ್ವಾರರ ತಿರುವಾಯ್ಮೊಳಿ (ಎಂದರೆ 'ಸಿರಿಬಾಯನುಡಿ') ನಾಥಮುನಿಗಳಿಗೆ ದೊರೆತ ನಂತರ ಅವರು ಅದರ ಹಿರಿಮೆಯನ್ನು ಒಂದು ಸಂಸ್ಕೃತ 'ತನಿಯನ್'ನಲ್ಲಿ ಸಂಗ್ರಹಮಾಡಿದರು—

ಭಕ್ತಾಮೃತಂ ವಿಶ್ವಜನಾನುಮೋದನಂ
ಸರ್ವಾರ್ಥದಂ ಶ್ರೀಶಠಕೋಪವಾಙ್ಮಯಂ ।
ಸಹಸ್ರಶಾಖೋಪನಿಷತ್ಸಮಾಗಮಂ
ನಮಾಮ್ಯಹಂ ದ್ರಾವಿಡವೇದ ಸಾಗರಂ ॥

ತಿರುವಾಯ್ಮೊಳಿಯು ಸಾಮವೇದದ ಸಾರವೆಂದೂ, ಉಪನಿಷತ್ತಿಗೆ ಸಮನಾದುದೆಂದೂ ಅವರು ಗ್ರಹಿಸಿದರು.

ನಾಥಮುನಿಗಳಿಂದ ಮೊದಲಾಗಿ ರಾಮಾನುಜರಿಂದ ವ್ಯವಸ್ಥಿತವಾದ ಶ್ರೀವೈಷ್ಣವಸಂಪ್ರದಾಯದಲ್ಲಿ ನಮ್ಮಾಳ್ವಾರರು ಸೇರಿಕೊಂಡದ್ದು ಹೀಗೆ. ಈ ಸಂಪ್ರದಾಯದ ಆಚಾರ್ಯಪರಂಪರೆಯಲ್ಲಿ ಅಸ್ಮದ್ದೇಶಿಕ (ಎಂದರೆ ತನಗೆ ನೇರವಾದ ಆಚಾರ್ಯರು), ಪರಮಾಚಾರ್ಯ, ರಾಮಾನುಜ, ಮಹಾಪೂರ್ಣ (ಪೆರಿಯ ನಂಬಿ), ಯಾಮುನಮುನಿ, ರಾಮ (ಮಣಕ್ಕಾಲ್ ನಂಬಿ), ಪದ್ಮವಿಲೋಚನ (ಉಯ್ಯಕೊಂಡರ್), ನಾಥಮುನಿ (ಆಳ ವಂದಾರ್), ಶಠದ್ವೇಷಿ (ಅಥವಾ ಶಠಕೋಪ, ಎಂದರೆ ನಮ್ಮಾಳ್ವಾರ್), ಸೇನೇಶ (ವಿಷ್ವಕ್ಸೇನ), ಶ್ರೀ (ಲಕ್ಷ್ಮಿ), ನಾರಾಯಣ ಎಂಬ ಕ್ರಮವಿದೆ. ಈ ಪರಂಪರೆಯಲ್ಲಿ ಉಳಿದ ಆಳ್ವಾರರು ಸೇರುವುದಿಲ್ಲ. ಆದರೆ ವ್ಯವಹಾರ ದಲ್ಲಿ ಎಲ್ಲ ಆಳ್ವಾರರನ್ನೂ ದಿವ್ಯಸೂರಿಗಳೆಂದು ಕರೆದು ಮೂವರು ಆಚಾರ್ಯರಿಗೆ (ಎಂದರೆ ನಾಥಮುನಿ, ಯಾಮುನ, ರಾಮಾನುಜ) ಪೂರ್ವಸೂರಿಗಳೆಂದೂ ಮಾರ್ಗದರ್ಶಿಗಳೆಂದೂ ಹೇಳುವುದಿದೆ. ಆಳ್ವಾರರ ಗೋಷ್ಠಿಯಲ್ಲೇ ರಾಮಾನುಜರನ್ನೂ ಸೇರಿಸಿ ಹದಿಮೂರನೆಯ ಆಳ್ವಾರ ರೆಂದು ಕರೆಯುವುದೂ ಉಂಟು.

ಆದರೆ ಶಠಕೋಪರೆಂಬ ಹೆಸರಿನ ನಮ್ಮಾಳ್ವಾರರೇ ಮೊದಲು 'ಆಳ್ವಾರ'ರೆಂದು ಕರೆಯಿಸಿಕೊಂಡವರು. ಅವರ ತಿರುವಾಯ್ಮೊಳಿಯ ಮೊದಲ ಪಾಶುರಕ್ಕೆ ವ್ಯಾಖ್ಯಾನವನ್ನು ಬರೆಯುತ್ತ ಮೊದಲಲ್ಲೇ ತಿರುಕ್ಕುರುಕೈಪ್ಪಿರಾನ್‌ಪಿಳ್ಳಾನ್ ಶಠಕೋಪರನ್ನು 'ಆಳ್ವಾರ್' ಎಂದು ಕರೆದುದು ಈ ವ್ಯವಹಾರಕ್ಕೆ ನಾಂದಿಯಾಯಿತು. ಆಳ್ವಾರೆಂಬ ಮಾತಿಗೆ ಅರ್ಥವನ್ನೂ ಅವರೇ ಬಿಡಿಸಿ ಹೇಳಿದರು. ಅವರು ಒದಗಿಸಿರುವ ಒಕ್ಕಣೆ ಸ್ವಾರಸ್ಯವಾಗಿದೆ—"ನಿಖಿಲ ಜಗದುದಯವಿಭವಾದಿ ಲೀಲನಾಯಿರುನ್ನ ಪರಮಪುರುಷನ್ನೈ ಉಳ್ಳಪಡಿಯೇ ಆಳ್‌ವಾರ್ ತಾಮ್ ತಮ್ಮುಡೈಯ ತಿರುಉಳ್ಳತ್ತಾಲೇ ಅನುಭವಿತ್ತು....." ಎಂದರೆ ಭಗವಂತನನ್ನು ಶಠಕೋಪರು ತಮ್ಮ ಸಿರಿಯೊಡಲಲ್ಲಿ ಅಡಗಿಸಿಕೊಂಡು, ಅದರಲ್ಲಿ ತಾವೇ ಆಳವಾಗಿ ಮುಳುಗಿ ಸಾಕ್ಷಾತ್ಕಾರದ ಸುಖವನ್ನು ನೇರವಾಗಿ ಅನುಭವಿಸಿದರಂತೆ.

ನಮ್ಮಾಳ್ವಾರರೂ ಅವರ ತಿರುವಾಯ್ಮೊಳಿಯೂ ಶ್ರೀವೈಷ್ಣವ ಸಂಪ್ರದಾಯದಲ್ಲಿ ಮೊದಲು ಸೇರಿಕೊಂಡು ಬಂದ ವಿವರಗಳು. ಉಳಿದ ಆಳ್ವಾರರ ಅಥವಾ ಅವರ ಪ್ರಬಂಧಗಳ ಪರಿಚಯ ನಾಥಮುನಿಗಳಿಗಾಗಲೀ, ಯಾಮುನಮುನಿಗಳಿಗಾಗಲೀ, ರಾಮಾನುಜಾಚಾರ್ಯರಿಗಾಗಲೀ ಇದ್ದಿ ತೆನ್ನುವುದಕ್ಕೆ ಆಧಾರವಿಲ್ಲ. ಹಾಗೆ ನೋಡಿದರೆ, ರಾಮಾನುಜರು ತಮ್ಮ

ಯಾವ ಗ್ರಂಥದಲ್ಲಿಯೂ ನಮ್ಮಾಳ್ವಾರರನ್ನಾಗಲೀ ಅವರ ತಿರುವಾಯ್ಮೊಳಿಯನ್ನಾಗಲೀ ಉಲ್ಲೇಖಿಸಿಲ್ಲ. ಆ ಆಳ್ವಾರರ ಪರಿಚಯ ತಮಗಿದ್ದಿತೆನ್ನುವುದನ್ನು ಸೂಚಿಸಿಯೂ ಇಲ್ಲ. ಇನ್ನು ಉಳಿದ ಆಳ್ವಾರರ ಮಾತೇನು ? ರಾಮಾನುಜರ ಜ್ಞಾನಪುತ್ರನೆಂದು ಪ್ರಸಿದ್ಧರಾದ ತಿರುಕ್ಕುರುಕೈಪ್ಪಿರಾನ್ ಪಿಳ್ಳಾನ್ ಬರೆದ 'ಆರಾಯಿರಪ್ಪಡಿ'ಯೇ (ಎಂದರೆ 'ಆರುಸಾವಿರ ಪಡಿ'ಗಳ ವ್ಯಾಖ್ಯಾನ) ತಿರುವಾಯ್ಮೊಳಿಗೆ ಸಿದ್ಧವಾದ ಮೊದಲ ವ್ಯಾಖ್ಯಾನ ; ಶ್ರೀವೈಷ್ಣವ ಸಿದ್ಧಾಂತಕ್ಕೆ ಹೊಂದಿಸಿರುವುದು. ಇವರು ಹುಟ್ಟಿದ್ದು ಕ್ರಿಸ್ತಾಬ್ದ ೧೧೬೨ರಲ್ಲಿ ; ತಿರುಮಲೆಯ ಮೇಲೆ. ಇವರೇ ಆಳ್ವಾರೆಂಬ ಮಾತನ್ನು ಬಳಕೆಗೆ ತಂದವರು; ಆ ಕಾಲಕ್ಕೆ ಅವರಿಗೂ ಅವರ ಸಂಪ್ರದಾಯದವರಿಗೂ ಆಳ್ವಾರರೆಂದರೆ ನಮ್ಮಾಳ್ವಾರೇ.

ನಮ್ಮಾಳ್ವಾರರ ಮೇಲೆ ನಾಥಮುನಿಗಳಿಗಿದ್ದ ಅಭಿಮಾನ ಅವರ ಮನೆತನದಲ್ಲಿ ಬೆಳೆಯಿತು. ಅವರ ಮಗ ಯಾಮುನಮುನಿಗಳ ಮೊಮ್ಮಗ ತಿರುಮಲೆನಂಬಿ ; ಇವರಿಗೆ ಇಬ್ಬರು ಸೋದರಿಯರು. ಒಬ್ಬಳು ಸೋದರಿಯ ಮಗನೇ ರಾಮಾನುಜರು ; ಇನ್ನೊಬ್ಬಳು ಸೋದರಿಯ ಮಗ ಗೋವಿಂದಭಟ್ಟ (ಎಂಬಾರ್). ರಾಮಾನುಜರ ಜ್ಞಾನಪುತ್ರ ತಿರುಕ್ಕುರ್‌ಕೈಪ್ಪಿರಾನ್ ಪಿಳ್ಳಾನ್ ತಿರುವಾಯ್ಮೊಳಿಗೆ ಬರೆದ ವ್ಯಾಖ್ಯಾನವನ್ನು ರಾಮಾನುಜರು ನೋಡಿದ್ದರೆಂದೂ, ಅದನ್ನು ಅವರು ಅನುಮೋದಿಸಿ 'ಭಗವದ್ವಿಷಯ'ವೆಂಬ ಹೆಸರನ್ನು ಕೊಟ್ಟರೆಂದೂ ಹೇಳುತ್ತಾರೆ. ಆದರೆ ಈ ಪರಂಪರೆಯಲ್ಲಿ ತಿರುವಾಯೊಳ್ಮಿಯ ಮೇಲೆ ವ್ಯಾಖ್ಯಾನಗಳು ಅಷ್ಟಾಗಿ ಬೆಳೆದು ಬರಲಿಲ್ಲ. ಮುಂದೆ ವೇದಾಂತ ದೇಶಿಕರು 'ಎಳುಪತ್ತು ನಾಲಾಯಿರಪ್ಪಡಿ' (ನಿಗಮ ಪರಿಮಳಂ) ಎಂಬೊಂದು ವ್ಯಾಖ್ಯಾನವನ್ನು ಬರೆದಿದ್ದರಂತೆ ; ಅದು ಉಪಲಬ್ಧವಿಲ್ಲ. ಆದರೆ ಅವರ 'ದ್ರಮಿಡೋಪನಿಷತ್ತಾತ್ಪರ್ಯಸಾರಾವಳಿ'ಯೂ 'ದ್ರಮಿಡೋಪನಿಷತ್ಸಾರ'ವೂ, ಪ್ರಸಿದ್ಧವಾದುವು. ಸಾಕ್ಷಾತ್‌ಸ್ವಾಮಿ (ವೇದಾಂತ ರಾಮಾನುಜಸ್ವಾಮಿ) ಎಂಬ ಇನ್ನೊಬ್ಬರು 'ಇರುಪತ್ತು ನಾಲಾಯಿರಪ್ಪಡಿ'ಯೆಂಬ ವ್ಯಾಖ್ಯಾನವನ್ನು ಬರೆದಿರುವುದೂ ಇದೇ ಪರಂಪರೆಯಲ್ಲೇ.

ಆದರೆ ಗೋವಿಂದಭಟ್ಟರ (ಎಂಬಾರರ) ಶಿಷ್ಯಪರಂಪರೆಯಲ್ಲಿ ತಿರುವಾಯ್ಮೊಳಿ ವಿಶಿಷ್ಟವಾಗಿ ಬೆಳಗಿತು. ಭಟ್ಟರ ಶಿಷ್ಯ ನಂಜೀಯರ್ (ವೇದಾಂತಿ ಜೀಯರ್) ಇದರ ಮೇಲೆ ಬರೆದ ವ್ಯಾಖ್ಯಾನ ತಿರುಕ್ಕುರುಕೈಪ್ಪಿರಾನ್ ಬರೆದದ್ದಕ್ಕಿಂತ ದೊಡ್ಡದು ; 'ಒನ್ಪದಿನಾಯಿರಪ್ಪಡಿ' (ಎಂದರೆ

'ಒಂಬತ್ತುಸಾವಿರಪಡಿ'). ರಾಮಾನುಜರ ಕಾಲದಲ್ಲೇ ಸಿದ್ಧವಾದ ಈ ವ್ಯಾಖ್ಯಾನ ರಾಮಾನುಜರಿಗೆ ತಿಳಿದಿದ್ದಿತೋ ಇಲ್ಲವೋ ಹೇಳಬರುವುದಿಲ್ಲ. ನಂಜೀಯರ್ ನಮ್ಮಾಳ್ವಾರರ ತಿರುವಾಯ್ಮೊಳಿ ಮಾತ್ರವಲ್ಲದೆ ಆಂಡಾಳ್ ರಚಿಸಿದ 'ತಿರುಪ್ಪಾವೈ', ಪೆರಿಯಾಳ್ವಾರರ 'ತಿರುಪ್ಪಲ್ಲಾಂಡು', ಮಧುರ ಕವಿಯಾಳ್ವಾರರ 'ಕಣ್ಣಿನುಣ್ ಶಿರತ್ತಾಂಬು' ಇವುಗಳ ಮೇಲೂ ವ್ಯಾಖ್ಯಾನ ಗಳನ್ನು ಬರೆದರು. ಅವರ ಶಿಷ್ಯ ನಂಪಿಳ್ಳೈ (ಇವರಿಗೆ ಲೋಕಾಚಾರ್ಯ್, ತಿರುಕ್ಕಳಿಕನ್ಱಿದಾಸರ್, ವರದರಾಜ ಎಂಬ ಹೆಸರುಗಳೂ ಇದ್ದುವು) ಎಂಬು ವರ ಶಿಷ್ಯ. ಪೆರಿಯ ಆಚ್ಚಾನ್ ಪಿಳ್ಳೈ (ಜನನ ಕ್ರಿ. ೧೨೨೮) ತಿರು ವಾಯ್ಮೊಳಿಯ ಮೇಲೆ 'ಇರುಪತ್ತುನಾಲಾಯಿರಪ್ಪಡಿ' (ಎಂದರೆ 'ಇಪ್ಪತ್ತು ನಾಲ್ಕುಸಾವಿರಪಡಿ') ಎಂಬ ವ್ಯಾಖ್ಯಾನವನ್ನು ಬರೆದರು. ಅಷ್ಟಲ್ಲದೆ ಅವರು ಉಳಿವ ಎಲ್ಲ ಆಳ್ವಾರರ ರಚನೆಗಳಿಗೂ (ಇಪ್ಪತ್ತುಮೂರು ಪ್ರಬಂಧ ಗಳಿಗೆ) ವ್ಯಾಖ್ಯಾನವನ್ನು ಸಿದ್ಧಪಡಿಸಿದರು. ಇಡೀ ನಾಲಾಯಿರಪ್ರಬಂಧದ (ನಾಲ್ಕು ಸಾವಿರ ಪಾಶುರಗಳ) ಕಲ್ಪನೆ ಕಾಣುವುದು ಇದೇ ಮೊದಲು. ಅಲ್ಲಿಯವರೆಗೆ ಪ್ರಬಂಧವೆಂದರೆ ನಮ್ಮಾಳ್ವಾರರ ತಿರುವಾಯ್ಮೊಳಿಯಷ್ಟೇ. ಹೀಗೆ ಪ್ರಬಂಧವಾಙ್ಮಯದ ಹರವು ಹಿಗ್ಗಿದುದು ಗೋವಿಂದಭಟ್ಟರ ಪರಂಪರೆಯಲ್ಲಿ, ರಾಮಾನುಜರ ಪರಂಪರೆಯಲ್ಲಲ್ಲ ಎಂಬುದನ್ನು ಗಮನಿಸ ಬೇಕು. ಗೋವಿಂದಭಟ್ಟರ ಪರಂಪರೆಯಲ್ಲಿ ಬಂದ ಪೆರಿಯ ಆಚ್ಚಾನ್ ಪಿಳ್ಳೈ ತೊಂಬತ್ತೈದು ವರ್ಷಕಾಲ ಬದುಕಿದ್ದು ಪ್ರಭಾವಶಾಲಿಗಳಾಗಿದ್ದ ವರು. ಅವರಿಂದಲೇ ಶ್ರೀವೈಷ್ಣವಸಂಪ್ರದಾಯಕ್ಕೂ ಆಳ್ವಾರರಿಗೂ ನಿಕಟವಾದ ಸಂಬಂಧ ಬೆಳೆದಿದ್ದಿರಬಹುದು.

ಆಳ್ವಾರರ ಸಂಖ್ಯೆ ಹನ್ನೆರಡೆಂದು ಎಣಿಕೆ; ಹತ್ತೆಂದು ಕಾಣಿಸು ವುದೂ ಉಂಟು. ಮೊದಲ ಆಳ್ವಾರರು ಮೂವರು: ಪೊಯ್‌ಗೈ, ಪೂದನ್, ಪೇಯನ್. ಇವರು ಕ್ರಿಸ್ತಾಬ್ದ ೫೫೦ರ ಸುಮಾರಿಗೆ ಸಮ ಕಾಲಿಕರಾಗಿ ಬದುಕಿದ್ದವರೆಂದು ತೋರುತ್ತದೆ. ಇವರು ಒಬ್ಬೊಬ್ಬರೂ ಒಂದು ನೂರು ಪಾಶುರಗಳನ್ನು 'ಅಂತಾದಿ' ಶೈಲಿಯಲ್ಲಿ (ಎಂದರೆ ಹಿಂದಿನ ಪದ್ಯದ ಕಡೆಯ ಮಾತಿನಿಂದ ಮುಂದಿನ ಪದ್ಯ ಮೊದಲಾಗುವ ಶೈಲಿ) ರಚಿಸಿದ್ದಾರೆ. ಅವಕ್ಕೆ ಕ್ರಮವಾಗಿ ಮುದಲ್ ತಿರುವಂದಾದಿ (ಮೊದಲ ಸಿರಿ–ಅಂತಾದಿ), ಇರಂಡಾಂ ತಿರುವಂದಾದಿ (ಎರಡನೆಯ ಸಿರಿ–ಅಂತಾದಿ), ಮತ್ತು ಮೂನ್ರಾಂ ತಿರುವಂದಾದಿ (ಮೂರನೆಯ ಸಿರಿ–ಅಂತಾದಿ) ಎಂಬ ಹೆಸರುಗಳಿವೆ.

ಉಳಿದ ಆಳ್ವಾರರ ಕ್ರಮವಾಗಲೀ ಕಾಲವಾಗಲೀ ಅಷ್ಟು ನಿರ್ದಿಷ್ಟವಾಗಿಲ್ಲ. ರಾಮಾನುಜರ ಜ್ಞಾನಪುತ್ರರೆಂದು ಹೆಸರಾದ ತಿರುಕ್ಕುರುಕೈಪ್ಪಿರಾನ್ ಪಿಳ್ಳಾನ್ (ಜನ್ಮ ಸಂವತ್ಸರ ೧೧೦೭) ಸಂಸ್ಕೃತದಲ್ಲಿ 'ತನಿಯನ್' ಎನಿಸಿಕೊಳ್ಳುವ ಶ್ಲೋಕವೊಂದನ್ನು ಬರೆದು ಅದರಲ್ಲಿ ಹದಿಮೂವರು ಮಂದಿ ಆಳ್ವಾರರನ್ನು ಹೆಸರಿಸಿದ್ದಾರೆ : ಭೂತ (ಪೂದತ್ತಾಳ್ವಾರ್), ಸರ (ಪೊಯ್‌ಗೈ), ಮಹ (ಪೇಯನ್), ಭಟ್ಟನಾಥ (ಪೆರಿಯಾಳ್ವಾರ್), ಭಕ್ತಿಸಾರ (ತಿರುಮಳಿಶೈ), ಕುಲಶೇಖರ, ಯೋಗಿವಾಹ (ತಿರುಪ್ಪಾಣ), ಭಕ್ತಾಂಘ್ರಿರೇಣು (ತೊಂಡರಡಿಪ್ಪೊಡಿ), ಪರಕಾಲ (ತಿರುಮಂಗೈ), ಯತೀಂದ್ರ (ರಾಮಾನುಜ), ಮಿಶ್ರ (ಮಧುರಕವಿ), ಶ್ರೀ (ಅಂಡಾಳ್, ಗೋದಾದೇವಿ) ಮತ್ತು ಪರಾಂಕುಶ (ನಮ್ಮಾಳ್ವಾರ್). ಈ ಪಟ್ಟಿಯಲ್ಲಿ ಕ್ರಮವನ್ನು ಕಾಣಲಾರೆವು. ಆಚಾರ್ಯರಾದ ರಾಮಾನುಜರನ್ನು ಬಿಟ್ಟರೆ, ಹನ್ನೆರಡು ಮಂದಿ ಆಳ್ವಾರರೆಂಬ ಪ್ರತೀತಿ ಆರಂಭವಾದುದನ್ನು ಮಾತ್ರ ಇಲ್ಲಿ ಕಾಣಬಹುದು. ನಮ್ಮಾಳ್ವಾರರ ಶಿಷ್ಯರಾದ ಮಧುರಕವಿ ನಮ್ಮಾಳ್ವಾರರನ್ನು ಕುರಿತೇ ತಮ್ಮ ಪಾಶುರಗಳನ್ನೆಲ್ಲ ಬರೆದು ಭಗವಂತನ ಅರ್ಚಾವತಾರಗಳ ಹಿರಿಮೆಯನ್ನು ಹಾಡಲಿಲ್ಲವಾಗಿ ಅವರನ್ನೂ, ಪೆರಿಯಾಳ್ವಾರರ ಸಾಕು ಮಗಳಾದ ಆಂಡಾಳ್ ಭಗವತ್ಸಹಚಾರಿಣಿಯೇ ಆದುದರಿಂದ ಅವಳನ್ನೂ ಆಳ್ವಾರರ ಪಟ್ಟಿಯಲ್ಲಿ ಸೇರಿಸದೆ ಆಳ್ವಾರರು ಹತ್ತೇ ಮಂದಿಯೆಂದು ಹೇಳುವುದುಂಟು. ಆದರೆ ಹನ್ನೆರಡೆನ್ನುವುದೇ ವಾಡಿಕೆ.

ಈ ಹನ್ನೆರಡು ಮಂದಿ ಆಳ್ವಾರರ ಕಾಲಕ್ರಮವನ್ನು ಕುರಿತು ನಾಲ್ಕು ಬೇರೆಬೇರೆ ಎಣಿಕೆಗಳಿವೆ. ರಾಮಾನುಜರ ತರುವಾಯ ತಿರುವರಂಗತ್ತು ಅಮುದನಾರ್ ಎಂಬುವರು ರಚಿಸಿದ 'ರಾಮಾನುಜ-ನೂತ್ರಂದಾದಿ' ಎಂಬ ಪ್ರಬಂಧದಲ್ಲಿ ಬರುವುದು ತುಂಬ ಹಿಂದಿನದು. ಅನಂತರ ವೇದಾಂತ ದೇಶಿಕರ 'ಪ್ರಬಂಧಸಾರ'ದಲ್ಲಿ ಬರುವುದು ; ಹದಿನಾಲ್ಕನೆಯ ಶತಮಾನದ ನಡುಭಾಗಕ್ಕೆ ಸೇರಿದ್ದು. ಮನವಾಳ-ಮಾಮುನಿಗಳು (ಪೆರಿಯ ಜೀಯರ್, ೧೩೭೦-೧೪೪೩) ಬರೆದಿರುವ 'ಉಪದೇಶರತ್ನಮಾಲೈ'ನಲ್ಲಿ ಬರುವುದು ಮೂರನೆಯದು. ಅವರ ಶಿಷ್ಯವರ್ಗಕ್ಕೆ ಸೇರಿದ್ದ ಅಪ್ಪಿಳ್ಳೈ ಬರೆದಿರುವ 'ವಾಳಿ-ತಿರುನಾಮಂ'ನಲ್ಲಿ ಬರುವ ಒಕ್ಕಣೆ ನಾಲ್ಕನೆಯದು. ವೇದಾಂತ ದೇಶಿಕರು ಕೊಟ್ಟಿರುವ ಪಟ್ಟಿಯಲ್ಲಿ ಆಳ್ವಾರರು ಹುಟ್ಟಿದ ಊರು, ಮಾಸ, ನಕ್ಷತ್ರಗಳ ವಿವರಗಳೂ ಇವೆ. ಅವರ ಪಟ್ಟಿಗೂ ಅಪ್ಪಿಳ್ಳೈ ಒದಗಿಸಿರುವ ಪಟ್ಟಿಗೂ ಸುಮಾರಾಗಿ ಹೊಂದಾಣಿಕೆಯಿದೆ.

ದೇಶಿಕರ ಪಟ್ಟಿಯನ್ನೇ ಹಿಡಿದರೆ, ಆಳ್ವಾರರ ಕ್ರಮ ಹೀಗೆ—ಪೊಯ್‌ಗೈ, ಭೂತಂ, ಪೇಯನ್, ತಿರುಮಳಿಶೈ, ನಮ್ಮಾಳ್ವಾರ್, ಮಧುರಕವಿ, ಕುಲಶೇಖರ, ಪೆರಿಯಾಳ್ವಾರ್, ಆಂಡಾಳ್, ತೊಂಡರಡಿಪ್ಪೊಡಿ, ತಿರುಪ್ಪಾಣ, ತಿರುಮಂಗೈ.

ಮೊದಲ ಮೂವರು ಆಳ್ವಾರರನ್ನು ಬೇರೆಯಾಗಿ 'ಮೊದಲಾಳ್ವಾರ'ರೆಂದು ಗುರುತಿಸುತ್ತಾರೆ. ಪೊಯ್‌ಗೈ ಕಚ್ಚಿಯಲ್ಲಿ ಅರ್ಪಶಿಮಾಸದ ಶ್ರವಣನಕ್ಷತ್ರದಲ್ಲಿ ಹುಟ್ಟಿದವರು ; ಭೂದತ್ತಾಳ್ವಾರರು ಕಡಲ್‌ಮಲ್ಲೈ (ಅಥವಾ ಮಾಮಲ್ಲೈ, ಈಗಿನ ಮದ್ರಾಸಿನ ನೆರೆಯ ಮಹಾಬಲಿಪುರಂ) ನಲ್ಲಿ ಅದೇ ಮಾಸದ ಆವಿಟ್ಟಂನಲ್ಲಿ ಹುಟ್ಟಿದವರು ; ಪೇಯಾಳ್ವಾರರು ಮಯಿಲೈ ಎಂಬಲ್ಲಿ ಅದೇ ಮಾಸದ ಶತಯಂನಲ್ಲಿ ಹುಟ್ಟಿದವರು. ಮೂವರೂ ಕಲೆತದ್ದು ತಿರುಕ್ಕೋವಲೂರಿನಲ್ಲಿ. ಅದನ್ನು ಕುರಿತು ಕಥೆಯೊಂದಿದೆ. ಪೊಯ್‌ಗೈ ಆಳ್ವಾರರು ಅಲ್ಲಲ್ಲಿ ತಿರುಗಾಡುತ್ತ ತಿರುಕ್ಕೋವಲೂರಿಗೆ ಬಂದರಂತೆ. ಆಗ ತಾನೆ ಇರುಳು ಕವಿಯುತ್ತಿತ್ತು ; ಮಳೆ ಸುರಿಯುತ್ತಿತ್ತು. ಮನೆಯೊಂದರ ಜಗುಲಿಯ ಮೇಲೆ ಪೊಯ್‌ಗೈ ಆಸರೆಗೆಂದು ನಿಂತರು. ಕತ್ತಲೆ ಕವಿದು ಏನೂ ಕಾಣದಾಯಿತು ; ಮಳೆಯೂ ಹೆಚ್ಚಿ ಕತ್ತಲೆ ಇನ್ನಷ್ಟು ಗಟ್ಟಿಯಾಯಿತು. ದಾರಿಯಲ್ಲಿ ನಡೆದುಬರುತ್ತಿದ್ದ ಪೂದತ್ತಾಳ್ವಾರರು ಇದೇ ಮನೆಯ ಮುಂದೆ ಬಂದು, 'ಜಗುಲಿಯ ಮೇಲೆ ಕೊಂಚ ಕಾಲ ತಂಗಬಹುದೆ ?' ಎಂದು ಕೇಳಿದರು. ಜಗುಲಿಯ ಮೇಲಿದ್ದವರು ಇವರಿಗೆ ಕಾಣಲಿಲ್ಲ; ದಾರಿಯಲ್ಲಿದ್ದವರು ಅವರಿಗೆ ಕಾಣಲಿಲ್ಲ. ಪೊಯ್‌ಗೈ "ಬನ್ನಿ, ಬನ್ನಿ, ಇಲ್ಲಿ ಒಬ್ಬರು ಮಲಗಬಹುದು, ಇಬ್ಬರು ಕೂಡಬಹುದು ; ಕೂಡೋಣ ಬನ್ನಿ !" ಎಂದರು. ಪೂದತ್ತಾಳ್ವಾರರು ಜಗುಲಿಯನ್ನೇರಿ ಕುಳಿತರು. ಸ್ವಲ್ಪ ಸಮಯದ ನಂತರ ಪೇಯಾಳ್ವಾರರೂ ಅದೇ ದಾರಿಯಲ್ಲಿ ಹೋಗುತ್ತ ಅದೇ ಮನೆಯ ಮುಂದೆ ಬರುವಾಗ ಜಗುಲಿಯ ಮೇಲೆ ಆಸರೆ ಪಡೆಯಲೆಂದು ಕೇಳಿದಾಗ, ಜಗುಲಿಯ ಮೇಲಿದ್ದವರು. "ಬನ್ನಿ, ಬನ್ನಿ, ಇಲ್ಲಿ ಒಬ್ಬರು ಮಲಗಬಹುದು, ಇಬ್ಬರು ಕೂಡಬಹುದು, ಮೂವರು ನಿಲ್ಲಬಹುದು ; ನಿಲ್ಲೋಣ ಬನ್ನಿ !" ಎಂದು ಅವರನ್ನೂ ಬರಮಾಡಿಕೊಂಡರು.

ಮೂವರೂ ಆಳ್ವಾರರು ಇರುಳಲ್ಲಿ, ಮಳೆಯಲ್ಲಿ ಒಬ್ಬರನ್ನೊಬ್ಬರು ಕಾಣಲಾರದೆ ಒಟ್ಟಿಗೆ ನಿಂತಿರುವಾಗ ಒಬ್ಬೊಬ್ಬರೂ ಭಗವದನುಭವದ ಆಳದಲ್ಲಿ ಮುಳುಗಿದ್ದರು. ಆಗ ಭಗವಂತ ನಾಲ್ಕನೆಯವನಾಗಿ ಅವರ ನಡುವೆ

ಸೇರಿಕೊಂಡ. ಈಗ ದೇವರ ಸಾನ್ನಿಧ್ಯವನ್ನು ಅನುಭವಿಸುತ್ತ ಮೂವರೂ ಮೂರು ಪಾಶುರಗಳನ್ನು ಹಾಡಿದರು. ಪೊಯ್‌ಗೈ ಆಳ್ವಾರರು ಹಾಡಿದ ತಮಿಳು ಪಾಶುರದ ಅರ್ಥ ಇದು—

'ನೆಲವೆ ಹಣತೆಯಾಗಿರಲು, ತುಂಬು ಸಾಗರವೆ ತುಪ್ಪವಾಗಿರಲು
ಉರಿವ ಸೂರ್ಯನೆ ಬೆಳಕಾಗಿರಲು—
ಸೊಡರಂತೆ ಚಕ್ರವನು ತೊಟ್ಟವನಡಿಗಳಿಗೆ
ಒಪ್ಪಿಸಿಹೆನೀ ಸೊಲ್ಲಮಾಲೆಯನು
ಒಡಲ ಬೇಗುದಿಯು ಕಡಲು ನೀಗುವುದೊ ಎಂದು !'

ಪೂದತ್ತಾಳ್ವಾರರ ಪಾಶುರದ ಅರ್ಥ ಇದು—

'ಒಲುಮೆಯೇ ಹಣತೆ, ಅವನ ಸೇರುವಾಸೆಯೆ ತುಪ್ಪ
ಆನಂದದಲಿ ದುಗುಡ ಹರಿದುದೆ ಅದರಲೊಡ್ಡುವ ಬತ್ತಿ
ಹೀಗಿರಲು ಮಿಗಿಲಾದ ಭಕ್ತಿಯೆನಿಪ
ಅರಿಮೆಯು ಸೊಡರನ್ನೆ ಬೆಳಗಿಸಿದೆ ನಾರಣನಿಗೆ
ಅರಿವನೀವ ತಮಿಳು ನುಡಿಗಳನೆ ಹಾಡುತ್ತ ನಾನು !'

ಪೇಯಾಳ್ವಾರರ ಪಾಶುರದ ಅರ್ಥ ಹೀಗಿದೆ—

'ಸಿರಿದೇವಿಯನು ಕಂಡೆ ಹೊನ್ನ ಮೈಯನು ಕಂಡೆ
ಸೂರ್ಯನೊಳು
ಹೊಳೆವ ರೂಪವನು ಕಂಡೆ – ಕಾಳಗದಿ ಮೆರೆವ
ಹೊನ್ನ ಚಕ್ರವನು ಕಂಡೆ, ಇನಿದಾದ ಶುಖವನು
ಹೊತ್ತ ಕೈಯನು ಕಂಡೆ !
ಎನ್ನೊಡೆಯನಹ ಕಡಲಬಣ್ಣದ ದೈವದಲಿ'

ಈ ಮೂರು ಪಾಶುರಗಳು ಮೂವರು ಆಳ್ವಾರರ ತಿರುವಂತಾದಿಗಳ ಮೊದಲ ಪದ್ಯಗಳಾಗಿವೆ.

ಈ ಮೂವರೊಂದಿಗೆ ತಿರುಮಳಿಶೈ ಆಳ್ವಾರರೂ ಸೇರಿದರೆಂದು ಪ್ರತೀತಿ. ಸಂಪ್ರದಾಯದ ಎಣಿಕೆಯಂತೆ ಇವರೂ ಮೊದಲಾಳ್ವಾರುಗಳ ಸಮಕಾಲಿಕರೇ. ನಾಲ್ವರೂ ಒಂದೇ ಸಂವತ್ಸರದಲ್ಲಿ (ಸಿದ್ಧಾರ್ಥಿ) ಹುಟ್ಟಿದವರು. ಮೊದಲ ಮೂವರೂ ತುಲಾ ಮಾಸದಲ್ಲಿ ಶುಕ್ಲ ಪಕ್ಷದಲ್ಲೇ ಹುಟ್ಟಿದವರು, ಬೇರೆ ಬೇರೆ ನಕ್ಷತ್ರಗಳಲ್ಲಿ. ನಾಲ್ಕನೆಯುವರು ಅದೇ ಸಂವತ್ಸರದ ಮಕರ ಮಾಸದಲ್ಲಿ ಮಘಾ ನಕ್ಷತ್ರದಲ್ಲಿ ಹುಟ್ಟಿದರೆಂದು ಎಣಿಕೆ ; ಮಳಿಶೈ ಎನ್ನುವ ಊರಿನಲ್ಲಿ ಅವರ ಜನನವಾದುದರಿಂದ ಅವರಿಗೆ

ತಿರುಮಳಿಶೈ ಎಂದೇ ಹೆಸರಾಯಿತು. ಸಂಸ್ಕೃತದಲ್ಲಿ ಆ ಊರಿಗೆ ಮಹೀ ಸಾರವೆಂದು ಕರೆದು ಇವರನ್ನು 'ಭಕ್ತಿಸಾರ'ರೆಂದು ಕರೆಯುವ ವಾಡಿಕೆ ಯಿದೆ. ತಿರುವಾಳರ್ ಎಂಬ ವೇಳಾಳರ ಮನೆಯಲ್ಲಿ ಬೆಳೆದು ಶೈವಮತ ವನ್ನು ಹಿಡಿದು ಅದರ ಆಚಾರದಲ್ಲೇ ತೊಡಗಿರುವಾಗ ಒಮ್ಮೆ ಪೇಯಾಳ್ವಾರರ ಸಂಪರ್ಕ ಒದಗಿ ಅದರ ಪ್ರಭಾವದಿಂದ ವೈಷ್ಣವರಾದ ರೆಂದು ಕಥೆಯಿದೆ. ಇವರ ಹೆಸರಿನಲ್ಲಿ ಎರಡು ಪ್ರಬಂಧಗಳಿವೆ— 'ನಾನ್ಮುಹನ್ ತಿರುವಂದಾದಿ' (೯೬ ಪಾಶುರಗಳು), ಮತ್ತು 'ತಿರುಚ್ಚಂದ ವಿರುತ್ತಂ' (೧೨೦ ಪಾಶುರಗಳು). ಎರಡರಲ್ಲೂ ಅವರ ಶಾಸ್ತ್ರಜ್ಞಾನವೂ ದೃಢವಾದ ಭಗವದ್ಭಕ್ತಿಯೂ ಎದ್ದು ಕಾಣುತ್ತವೆ.

ಈ ನಾಲ್ವರು ಆಳ್ವಾರರ ಪ್ರಾಚೀನತೆಯನ್ನು ಎಲ್ಲರೂ ಒಪ್ಪು ತ್ತಾರೆ. ಉಳಿದವರ ಕಾಲ, ಕ್ರಮಗಳನ್ನು ಕುರಿತು ಒಮ್ಮತವಿರದೆಂದು ಆಗಲೇ ಹೇಳಿದೆಯಷ್ಟೆ. ಪ್ರಕೃತ, ಈ ಸಂಗ್ರಹದಲ್ಲಿ ಸೇರಿರುವ ನಮ್ಮಾಳ್ವಾ ರರ ವಿಚಾರವಾಗಿ ನಾಲ್ಕು ಮಾತು ಹೇಳಬೇಕು. ನಾಥಮುನಿಗಳು ನಮ್ಮಾಳ್ವಾರರ 'ತಿರುವಾಯ್ಮೊಳಿ'ಯನ್ನು ಪಡೆದುಕೊಂಡ ಕಥೆಯನ್ನೂ ಈಗಾಗಲೇ ಹೇಳಿದೆ. ನಮ್ಮಾಳ್ವಾರರೇ ಶ್ರೀವೈಷ್ಣವಸಂಪ್ರದಾಯಕ್ಕೆ ಮೊದಲು ಮಾನ್ಯರಾದ ಆಳ್ವಾರರು; ಉಳಿದ ಆಳ್ವಾರರ ಪರಿಚಯು ವಾದುದು ಕಾಲಕ್ರಮದಲ್ಲಿ. ಒಂದು ನಂಬಿಕೆ ನಮ್ಮಾಳ್ವಾರರು ಮೇಲೆ ಹೇಳಿದ ನಾಲ್ವರು ಮೊದಲಾಳ್ವಾರರ ನಂತರವೇ ಬಂದವರು, ಐದನೆ ಯವರು ಎಂದು. ಇನ್ನೊಂದು ನಂಬಿಕೆ ಆಳ್ವಾರರ ಸಾಲಿನಲ್ಲಿ ಅವರ ಶಿಷ್ಯರಾದ ಮಧುರಕವಿಯಾಳ್ವಾರರನ್ನು ಬಿಟ್ಟರೆ ಅವರೇ ಕಡೆಯುವರು ಎಂದು. ಮಧುರಕವಿಯಾಳ್ವಾರರ ಶಿಷ್ಯರಾಗಿದ್ದ ಪರಾಂಕುಶದಾಸ ರಿಂದಲೇ ತಾನೆ ನಾಥಮುನಿಗಳು ನಮ್ಮಾಳ್ವಾರರ ಪರಿಚಯುವನ್ನು ಪಡೆದು ಕೊಂಡದ್ದು ? ಎಂದ ಮೇಲೆ, ನಾಥಮುನಿಗಳ ಕಾಲಕ್ಕೆ (ಎಂದರೆ ಕ್ರಿಸ್ತಾಬ್ದ ೯೦೦ರ ಸುಮಾರಿಗೆ), ಒಂದೆರಡು ತಲೆಮಾರುಗಳಷ್ಟು ಹಿಂದೆ ನಮ್ಮಾಳ್ವಾ ರರ ಕಾಲವೆಂದಾಯಿತು. ಕ್ರಿಸ್ತಾಬ್ದ ೭೬೦ರ ಸುಮಾರು ಎಂದೊಂದು ಎಣಿಕೆಯೂ ಇದೆ.

'ತೆಂಕಣ ದಿಕ್ಕಿಗೆ ತಿಲಕದಂತಿರುವ', ತಾಮ್ರಪರ್ಣಿ (ಪೊರುನಲ್) ನದಿಯ ಹತ್ತಿರವಿರುವ ತಿರುಕ್ಕುರುಗೂರು (ಸಂಸ್ಕೃತದಲ್ಲಿ ಕುರುಕಾಪುರ) ನಮ್ಮಾಳ್ವಾರರ ಹುಟ್ಟೂರು ; ಹೀಗಾಗಿ ಅದನ್ನು 'ಆಳ್ವಾರ್ ತಿರುನಗರಿ' ಎಂದೇ ಕರೆಯುವುದು ವಾಡಿಕೆ ಮತ್ತು ಈ ಆಳ್ವಾರರನ್ನು 'ತಿರುಕ್ಕುರು

ಗೂರ್ ನಂಬಿ' ('ನಂಬಿ'ಯೆಂದರೆ ಒಡೆಯನೆಂದರ್ಥ) ಎಂದೇ ಮಧುರಕವಿಗಳು ಕರೆದಿದ್ದಾರೆ. ಇವರ ದಿಟವಾದ ಹೆಸರು ಮಾರಪ್ಪಿರಾನ್ ('ಪಿರಾನ್' ಎಂದರೆ ಉಪಕಾರಕನಾದ ಹಿರಿಯ) ಎಂದು ; ಮಾರನ್‌ಕಾರಿಯ ಮಗ ಕಾರಿಮಾರನ್ ಎನ್ನುವ ಉಲ್ಲೇಖವೂ ಇದೆ. ನಾಥಮುನಿಗಳು ತಾವು ರಚಿಸಿದ ತನಿಯನ್‌ನಲ್ಲಿ ಇವರನ್ನು 'ವೇದವನ್ನು ತಮಿಳಿಗೆ ತಂದ ಮಾರರು' ('ವೇದಂ ತಮಿಳ್‌ಶೆಯ್ದ ಮಾರನ್') ಎಂದು ಬಣ್ಣಿಸಿದ್ದಾರೆ. ಶಠಾರಿ ಅಥವಾ ಶಠಕೋಪ ಎಂಬ ಹೆಸರೂ ಅವರಿಗಿದ್ದಿತು. ವಿಷ್ಣುವಿನ ಸೇನಾನಿಯಾದ ವಿಷ್ವಕ್ಸೇನನ ಅವತಾರವೇ ಅವರೆಂದು ನಂಬಿಕೆ.

ಅವರ ಹೆಸರಿನಲ್ಲಿ ನಾಲ್ಕು ಪ್ರಬಂಧಗಳಿವೆ—'ತಿರುವಿರುತ್ತಂ' (ನೂರು ಪಾಶುರಗಳು, ಋಗ್ವೇದದ ಸಾರವೆಂದು ಪ್ರಸಿದ್ಧವಾದುದು) ; 'ತಿರುವಾಶಿರಿಯಂ' (ಏಳೇ ಪಾಶುರಗಳು, ಯಜುರ್ವೇದದ ಸಾರವೆಂದು ಪ್ರಸಿದ್ಧಿ), 'ತಿರುವಾಯ್ಮೊಳಿ' (೧,೧೦೨ ಪಾಶುರಗಳು, ಸಾಮವೇದದ ಸಾರ), ಮತ್ತು 'ಪೆರಿಯತಿರುವಂದಾದಿ' (೮೭ ಪಾಶುರಗಳು, ಅಥರ್ವ ವೇದದ ಸಾರ). ಇವುಗಳಲ್ಲಿ 'ತಿರುವಾಯ್ಮೊಳಿ' ತುಂಬ ಸಹಸ್ರಗಾಥೆ ಹೆಗ್ಗಳಿಕೆಯದು. ವೇದಾಂತದೇಶಿಕರು ಅದನ್ನು ನಾಲ್ಕೂ ವೇದಗಳ ಸಾರವೆಂದು ಬಣ್ಣಿಸಿದ್ದಾರೆ. ಶ್ರೀವೈಷ್ಣವ ಸಿದ್ಧಾಂತದ ಎಲ್ಲ ಪ್ರಮೇಯಗಳೂ ಇಲ್ಲಿ ಅಡಗಿವೆಯೆಂದು ಅದರ ಹಿರಿಮೆ.

ಇವರ ಹಿರಿಮೆಯನ್ನು ಲೋಕಕ್ಕೆ ಮೊದಲು ತೋರಿಸಿಕೊಟ್ಟವರು ಮಧುರಕವಿಯಾಳ್ವಾರರು. ನಮ್ಮಾಳ್ವಾರರ ತಂದೆ ಮಾರನ್–ಕಾರಿ ಆನೆಮಲೆಯೆಂಬ ಗುಡ್ಡದ ಮೇಲೆ ನರಸಿಂಹನ ಗುಡಿಯೊಂದನ್ನು ಕಟ್ಟಿಸಿದನಂತೆ. ಶೂದ್ರನಾದ ಇವನು ಕಟ್ಟಿಸಿದ ಗುಡಿಯಲ್ಲಿ ಬ್ರಾಹ್ಮಣ ಪಂಡಿತರಾದ ಮಧುರಕವಿ ಮೂರ್ತಿಪ್ರತಿಷ್ಠೆಯನ್ನು ಮಾಡಿದರು. ಮಾರನ್–ಕಾರಿಯ ಭಕ್ತಿಗೆ ಮಧುರಕವಿ ಪರವಶರಾಗಿ, ಅವನನ್ನು ತಮ್ಮ ಸ್ನೇಹಿತನಂತೆ ಕಂಡುಕೊಳ್ಳುತ್ತಿದ್ದರು. ಮಾರನ್–ಕಾರಿಯ ಮಗ ಹುಟ್ಟುವಾಗಲೇ ಮಹಿಮೆಯನ್ನು ಮೆರೆದು, ತನ್ನನ್ನು ಹಿಡಿಯಲು ಬಂದ 'ಶಠ'ವೆಂಬ ಮಾಯೆಯನ್ನು ಹುಂಗುಟ್ಟಿಯೇ ದೂರ ಅಟ್ಟಿ ಶಠಾರಿಯೆಂದಾದಮೇಲೆ, ಮಧುರಕವಿ ಅವನಲ್ಲಿ ವಿಶೇಷವಾದ ಭಗವದಂಶವನ್ನು ಕಂಡು, ಮುಂದೆ ಅವರಲ್ಲಿ ಶಿಷ್ಯವೃತ್ತಿ ಮಾಡಿದರು. ಅವರ ಪ್ರಸಿದ್ಧವಾದ ತನಿಯನ್ ಒಂದರಲ್ಲಿ—

ಹಲಗಂಟು, ನುಣ್ಣನೆಯ ಕಿರುಹಗ್ಗ, ಅದರಲಿ
ತನ್ನನೇ ಕಟ್ಟಿಸಿಕೊಂಡವ ಎನ್ನಪ್ಪ
ಹಿರಿಯಮಾಯದವ !
ಅವನ ಹೆಸರ ಹಿಡಿವುದಕಿಂತ
ಕುರುಗೂರನಂಬಿಯೆನಲು
ಎನ್ನ ನಾಲಗೆಗದೆ ರುಚಿ, ಅಮೃತವೆ ಊರುವುದು !

ಎಂದಿದ್ದಾರೆ. ಇದೇ 'ಕಣ್ಣಿನುಣ್ ಶಿರುತ್ತಾಂಬಿನಾಲ್' ಎಂದು ಮೊದಲಾಗುವ ಪದ್ಯ. ಯಶೋದೆಯ ಕೈಯಿಂದ ಸಣ್ಣ ಹಗ್ಗದಲ್ಲಿ ಕಟ್ಟಿಸಿಕೊಂಡ ಮಾಯಾವಿ ಕೃಷ್ಣ. ಅವನ ಹೆಸರನ್ನು ನೆನೆವುದಕ್ಕಿಂತ ಹೆಚ್ಚಾಗಿ ನಮ್ಮಾಳ್ವಾರರನ್ನೇ ನೆನೆಯಲು ಬಯಸಿದರು ಮಧುರಕವಿ. ಮುಂದಿನ ಪದ್ಯದಲ್ಲಿ—

ನಾಲಗೆಯಲವನನ್ನೆ ಹಾಡಿ ನಲಿದೆನು,
ಬಯಸಿ ಬಂದೆನವನ ಹೊನ್ನಡಿಗಳನೆ, ದಿಟವಾಗಿ
ಅರಿಯೆ ನಾ ಮತ್ತೊಂದು ದೈವವನು !
ಕುರುಗೂರನಂಬಿಯು
ಹಾಡನ್ನೆ ಇನಿತಾಗಿ ಹಾಡಿ ತಿರಿಯುವೆನು !

ಎಂದಿದ್ದಾರೆ. ಹೀಗೆ ಹನ್ನೊಂದು ಪದ್ಯಗಳನ್ನು ನಮ್ಮಾಳ್ವಾರರನ್ನು ಕುರಿತೇ ಹಾಡಿದರು. ಪ್ರಬಂಧ ವಾಙ್ಮಯದಲ್ಲಿ ಇವು 'ಕಣ್ಣಿನುಣ್ ಶಿರುತ್ತಾಂಬು' ಎಂದೇ ಪ್ರಸಿದ್ಧವಾಗಿವೆ. 'ತಿರುವಾಯ್ಮೊಳಿ'ಯನ್ನು ಹಾಡುವ ಮೊದಲೂ ಕಡೆಗೂ ಇವನ್ನು ಪಠಿಸುವುದು ವಾಡಿಕೆ.